# ಮರಳಿ ಮಲ್ಲಿಗೆ

## ದಾಸೋತ್ಸವ ಸಂಚಿಕೆ-2013





ಕುವೈತ್ ಕನ್ನಡ ಕೂಟ
Kuwait Kannada Koota

# ಗಾನ ಸಂಧ್ಯಾ ಮತ್ತು ವಾರ್ಷಿಕ ಮಹಾಸಭೆ-2012




















**ಆರ್. ದಿನೇಶ್**
ಅಧ್ಯಕ್ಷರು,
ಕುವೈತ್ ಕನ್ನಡ ಕೂಟ.

ಕನ್ನಡ ಕೂಟದ ಸಮಸ್ತ ಬಂಧು -ಬಾಂಧವರಿಗೆ ನನ್ನ ನಮಸ್ಕಾರಗಳು. ನಮ್ಮ ಕೂಟದ ಚಟುವಟಿಕೆಗಳಲ್ಲಿ ದಾಸೋತ್ಸವವು ಅತ್ಯಂತ ಭಕ್ತಿ ಪ್ರಧಾನವಾದ ಕಾರ್ಯಕ್ರಮ.

ದಾಸೋತ್ಸವವು ದಾಸ ಸಂತರ ಪರಿಚಯ, ಆರಾಧನಾ ಭಜನೆಗಳೊಂದಿಗೆ ಕೂಟದ ಸದಸ್ಯ ಬಾಂಧವರ ಮನಸ್ಸಿಗೆ ಭಕ್ತಿ ಭಾವದ ಅರಿವು ಮೂಡಿಸಿ ಭಗವಂತನೆಡೆಗೆ ಒಲವು ಮೂಡುವಂತೆ ಪ್ರೇರೇಪಿಸುತ್ತದೆ.

ಭಕ್ತಿ ಹಾಗೂ ಸಂಗೀತ ಸಾಹಿತ್ಯಕ್ಕೆ ಕನ್ನಡನಾಡಿನ ದಾಸರುಗಳ ಕೊಡುಗೆ ಅತ್ಯಂತ ಅಮೂಲ್ಯವಾದುದು. ಇಂತಹ ದಾಸರುಗಳನ್ನು ಸ್ಮರಿಸಿ ಸಂಗೀತವನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಕರ್ತವ್ಯ. ಈ ವರ್ಷದ ದಾಸೋತ್ಸವದಲ್ಲಿ ದಾಸರುಗಳ ಸಂಕೀರ್ತನೆ ಮಾಡಲು ಖ್ಯಾತ ಶಾಸ್ತ್ರೀಯ ಗಾಯಕರಾದ ಪಂಡಿತ ಜಯತೀರ್ಥ ಮೇವುಂಡಿಯವರು ನಮ್ಮ ತಾಯಿನಾಡಿನಿಂದ ಇಲ್ಲಿಗೆ ಬಂದು ಮಧುರ ದಾಸ ಸಂಕೀರ್ತನೆಯನ್ನು ಸಾದರ ಪಡಿಸಲಿದ್ದಾರೆ.
ಎಲ್ಲಾ ದಾಸಶ್ರೇಷ್ಠರುಗಳ ಆರಾಧ್ಯ ದೇವ ಶ್ರೀಕೃಷ್ಣ ಪರಮಾತ್ಮನು ಸಜ್ಜನರನ್ನು ರಕ್ಷಿಸಲು ದುಷ್ಟರನ್ನು ನಾಶಪಡಿಸಲು ಪ್ರತೀಯುಗದಲ್ಲಿ ವಿವಿಧ ಅವತಾರಗಳಲ್ಲಿ ಅವತರಿಸುವ ಶ್ರೀ ವಿಷ್ಣುವಿನ ದಶಾವತಾರವನ್ನು ಪರಿಚಯಿಸುವ ಕಾರ್ಯವನ್ನು ನಮ್ಮ ಸಾಂಸ್ಕೃತಿಕ ಸಮಿತಿಯವರು ಪ್ರಯತ್ನಿಸಿದ್ದಾರೆ.

ಇದರ ಜೊತೆಗೆ ಈ ದಿನದ ರಥೋತ್ಸವವು ನಮ್ಮ ಕೂಟದ ಒಂದು ವಿನೂತನ ಪ್ರಯತ್ನ.

ಮರಳ ಮಲ್ಲಿಗೆಯ ಈ ಬೊಚ್ಚಲ ಸಂಚಿಕೆಯನ್ನು ವಿಭಿನ್ನ, ವಿನೂತನ ಹಾಗೂ ಮಾಹಿತಿಪೂರ್ಣವಾಗಲು ಮರಳ ಮಲ್ಲಿಗೆ ತಂಡ ಶ್ರೀ ಅರುಣ್ ಕುಮಾರ್ ರವರ ನೇತೃತ್ವದಲ್ಲಿ ಮೇರೆ ಮೀರಿ ಶ್ರಮಿಸಿದೆ. ಅದಕ್ಕೆ ಪೂರಕವೆಂಬಂತೆ ಲೇಖನ ಮತ್ತು ಮಾಹಿತಿ ಪೂರೈಕೆ ಮಾಡಿದ ಪ್ರತೀ ಸದಸ್ಯರ ಸಹಕಾರ ಪ್ರಶಂಸನೀಯ. ನಿಮ್ಮೆಲ್ಲರ ಪ್ರೋತ್ಸಾಹದೊಂದಿಗೆ ಮುಂದೆ ಬರುವ ನಮ್ಮ ಕೂಟ ಇನ್ನಿತರ ಕಾರ್ಯಕ್ರಮಗಳನ್ನು ಕನ್ನಡನಾಡಿನ ನಡೆ, ನುಡಿ, ನಾಡ ಸಂಸ್ಕೃತಿ, ಪರಂಪರೆಗಳನ್ನು ಮೈಗೂಡಿಸಿಕೊಂಡು ನವ ನವೀನವಾಗಿ, ಸ್ಮರಣೀಯವಾಗಿ ನಿಮ್ಮ ಮುಂದಿಡುವ ಪ್ರಯತ್ನವನ್ನು ನಾನು, ನನ್ನ ಕಾರ್ಯಕಾರಿ ಸಮಿತಿಯ ಮಿತ್ರರು ಹಾಗೂ ವಿವಿಧ ಸಮಿತಿಯ ಸಂಚಾಲಕರು ಮತ್ತು ಸದಸ್ಯರುಗಳು ಭರವಸೆ ನೀಡುತ್ತೇವೆ.

ಜೈ ಹಿಂದ್, ಜೈ ಕರ್ನಾಟಕ ಮಾತೆ

**ಕುವೈತ್ ಕನ್ನಡ ಕೂಟ**
**ಕಾರ್ಯಕಾರಿ ಸಮಿತಿ-2013**



ಎಡಗಡೆಯಿಂದ: ರಮೇಶ್ ಚಿಕ್ಕಣ್ಣ- ಖಜಾಂಚಿ, ಆರ್. ಡಿನೇಶ್ – ಅಧ್ಯಕ್ಷರು, ಪಿ. ರಮೇಶ್ – ಕಾರ್ಯದರ್ಶಿ, ವಿಜಯ್ ಕೈರಂಗಳ – ಉಪಾಧ್ಯಕ್ಷರು

ನಮಸ್ಕಾರ,

ಕು.ಕ.ಕೂ ಸಮಿತಿಯ ಸದಸ್ಯಮಿತ್ರರೆಲ್ಲರಿಗೂ ಮರಳಮಲ್ಲಿಗೆ ಸಮಿತಿಯ ಸವಿನಯ ವಂದನೆಗಳು.

2013ನೇ ವರ್ಷದ ಚುನಾಯಿತ ಕಾರ್ಯಕಾರಿ ಸಮಿತಿಗೆ ಅಭಿನಂದನೆಗಳು. ತಮ್ಮ ಕಾರ್ಯಾಚರಣೆಯನ್ನು ಹಾಸ್ಯನಾಟಕದೊಂದಿಗೆ ಆರಂಭಿಸಿ ನಮ್ಮನ್ನು ಹಾಸ್ಯದ ಹೊನಲಲ್ಲಿ ತೇಲಾಡಿಸಿದ್ದಾರೆ. ಮರಳಮಲ್ಲಿಗೆ ಸಮಿತಿಗಾಗಿ ನಮ್ಮೆಲ್ಲರನ್ನು ಪರಿಗಣಿಸಿ ಹೊಸ ಪುಟ ಅಧ್ಯಾಯ ಶುರುಮಾಡಲು ಅವಕಾಶ ನೀಡಿದ್ದೀರಿ. ತಮ್ಮಗಳ ಅಭಿರುಚಿಗೆ ತಕ್ಕಂತೆ ಮರಳಮಲ್ಲಿಗೆ ಮೂಡಿಬರಲೆಂದು ಆಶಿಸುತ್ತೇವೆ.

"ದಾಸೋತ್ಸವ"ದ ಈ ಸಂಚಿಕೆಯನ್ನು ಉತ್ತಮ ರೀತಿಯಲ್ಲಿ ಹೊರತರಲು ಪ್ರಯತ್ನಿಸಿದ್ದೇವೆ. ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದ ಕಾರ್ಯಕಾರಿ ಸಮಿತಿಗೂ, ಸದಸ್ಯ ಮಿತ್ರ ವೃಂದಕ್ಕೂ ಧನ್ಯವಾದಗಳು. ಲೋಪದೋಷಗಳಿದ್ದಲ್ಲಿ ಕ್ಷಮೆ ಇರಲಿ.

ಈ ಶುಭಸಂದರ್ಭದಲ್ಲಿ ಹೆಚ್ಚಿನ ಸದಸ್ಯ ಮಿತ್ರರು ಬರಹಗಳನ್ನು ಕಳಿಸಿದ್ದೀರಿ. ನಮ್ಮ ಶಾಲಾ ವಿದ್ಯಾರ್ಥಿ ಮಿತ್ರವೃಂದ ಬಹುಶಃ ಪರೀಕ್ಷಾ ತಯಾರಿಯಲ್ಲಿ ಭರದಿಂದ ಸಾಗಿದ್ದು ಮರಳಮಲ್ಲಿಗೆಗೆ ಬರಹ, ಕಲೆಯನ್ನು ಕಳಿಸಲು ಸಮಯದ ಅಭಾವವೆಂದು ನಮ್ಮ ಅನಿಸಿಕೆ. ಪರೀಕ್ಷಾ ನಂತರ ಹೆಚ್ಚಿನ ಮಕ್ಕಳಿಂದ ಹೆಚ್ಚಿನ ಬರಹಗಳನ್ನು ಅಪೇಕ್ಷಿಸುತ್ತೇವೆ. ಕು.ಕ.ಕೂ ವಿದ್ಯಾರ್ಥಿ ವೃಂದಕ್ಕೆ ಮುಂಬರುವ ಪರೀಕ್ಷೆಗಳಿಗಾಗಿ ಶುಭ ಹಾರೈಕೆಗಳು.

"ದಾಸೋತ್ಸವ" ವಿಜೃಂಭಣೆಯಿಂದ ನೆರವೇರಲೆಂದು ಹಾರೈಸುತ್ತೇವೆ.

ಮರಳ ಮಲ್ಲಿಗೆ ಸಮಿತಿ

# ಶ್ರೀ ಜಯತೀರ್ಥ ಮೇವುಂಡಿ.

**ಕಿರು ಪರಿಚಯ**



ಉತ್ತರ ಕರ್ನಾಟಕ ಹಲವಾರು ಸಂಗೀತ ದಿಗ್ಗಜರನ್ನ ನಮ್ಮ ನಾಡಿಗೆ ಕೊಡುಗೆಯಾಗಿ ನೀಡಿದೆ. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಪಂ. ಸವಾಯಿ ಗಂಧರ್ವ, ಭಾರತ ರತ್ನ ಪಂ. ಭೀಮಸೇನ ಜೋಷಿ, ಡಾ. ಗಂಗೂಬಾಯಿ ಹಾನಗಲ್, ಪಂ. ಮಲ್ಲಿಕಾರ್ಜುನ ಮನ್ಸೂರ್, ಪಂ. ಬಸವರಾಜ್ ರಾಜ್ ಗುರು. ಇದೇ ಸಾಲಿಗೆ ಸೇರುವ ಮತ್ತೊಬ್ಬ ಸಂಗೀತ ದಿಗ್ಗಜ ಶ್ರೀ ಜಯತೀರ್ಥ ಮೇವುಂಡಿ.

ತಮ್ಮ ಸುಮಧುರ ಕಂಠದಿಂದಲೇ ಖ್ಯಾತಿಗೊಂಡಿರುವ ಜಯತೀರ್ಥ ಮೇವುಂಡಿ ಕಿರಣ ಘರಾನದ ಹಾದಿಯನ್ನೆ ಅನುಸರಿಸುತ್ತಿದ್ದಾರೆ. ಸುಮಧರ ಸಂಗೀತಕ್ಕೆ ಖ್ಯಾತಿಯಾಗಿರುವ ಕಿರಣ ಘರಾನವು ಪ್ರಖ್ಯಾತ ಗಾಯಕ ಉಸ್ತಾದ್ ಅಬ್ದುಲ್ ಕರೀಮ್ ಖಾನ್ ಅವರಿಂದ ಆರಂಭಗೊಂಡಿತು.

ಜಯತೀರ್ಥ ಮೇವುಂಡಿ 1972ರಲ್ಲಿ ಹುಬ್ಬಳಿಯಲ್ಲಿ ಹುಟ್ಟಿದರು. ಬಾಲ್ಯದಿಂದಲೆ ಶಾಸ್ತ್ರೀಯ ಸಂಗೀತವನ್ನು ಅವರ ಅಮ್ಮನಿಂದಲೆ ಕಲಿತರು. ನಂತರ ಅವರು ಸಂಗೀತ ರತ್ನ ಲೇಟ್ ಪಂ. ಅರ್ಜುನ್ನ ನಾಕೋಡ್ ಅವರಿಂದ ಸುಮಾರು ಹತ್ತು ವರ್ಷಗಳ ಕಾಲ ಸಂಗೀತ ಅಭ್ಯಾಸ ಮಾಡಿದರು. ಅನಂತರ ಭಾರತ ರತ್ನ ಪಂ. ಭೀಮಸೇನ ಜೋಷಿ ಅವರ ಶಿಷ್ಯರಾದ ಪಂ. ಶ್ರೀಪತಿ ಪಡೆಗರ್ ಅವರಿಂದ ಸುಮಾರು ಹನ್ನೆರೆಡು ವರ್ಷಗಳ ಕಾಲ ಸಂಗೀತಾಭ್ಯಾಸ ಮಾಡಿದರು.

ಶ್ರೀ ಜಯತೀರ್ಥ ಮೇವುಂಡಿಯವರು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ, ಹಿಂದಿ ಭಜನ್, ಸಂತವಾಣಿ, ಕನ್ನಡ ಭಜನ್, ದಾಸವಾಣಿ ಹಾಡುವುದರಲ್ಲಿ ಖ್ಯಾತಗೊಂಡಿದ್ದಾರೆ. ಅವರ ಹಲವಾರು ಗೀತೆಗಳು ಧ್ವನಿಸುರಳಿಯಾಗಿ ದೇಶವಿದೇಶಗಳಲ್ಲಿಯೂ ಹರಿದಾಡುತ್ತಿದೆ. ಇವರು ಹಲವಾರು ಪ್ರಶಸ್ತಿಗಳಿಗೂ ಭಾಜನರಾಗಿದ್ದಾರೆ. 2007ನೇ ಇಸವಿಯಲ್ಲಿ ಅಂದಿನ ಭಾರತದ ರಾಷ್ಟ್ರಪತಿ ಡಾ. ಅಬ್ದುಲ್ ಕಲಾಮ್ ಅವರಿಂದ "Young Maestro" ಬಿರುದನ್ನು ಸಹ ಪಡೆದಿದ್ದಾರೆ. ಪಂ. ಜಸ್ರಾಜ್ ಗೌರವ ಪುರಸ್ಕಾರ, ಮೇವತಿ ಘರಾನ ಸಂಗೀತ ಗೌರವ ಪುರಸ್ಕಾರ, ಷಣ್ಮುಖಾನಂದ ಸಂಗೀತ ಶಿರೋಮಣಿ ಪುರಸ್ಕಾರ, ಅದಿತ್ಯ ವಿಕ್ರಮ್ ಬಿರ್ಲಾ-ಕಲಾ ಕಿರಣ ಪುರಸ್ಕಾರ ಮತ್ತು 2011ರಲ್ಲಿ ಪಂ.ಭೀಮಸೇನ ಜೋಷಿ ಸ್ವರ ಭಾಸ್ಕರ ಪ್ರಶಸ್ತಿ, ಪಂ. ಬಸವರಾಜರಾಜಗುರು ಪುರಸ್ಕಾರ ಮತ್ತು ಪುಲೋತ್ಸವ್ ತರುಣೈ ಸನ್ಮಾನ ಇವರಿಗೆ ಲಭಿಸಿದೆ.

ಶ್ರೀ ಜಯತೀರ್ಥ ಮೇವುಂಡಿಯವರು ಅಮೇರಿಕಾ, ಸಿಂಗಪೂರ್, ಗಲ್ಫ್ ದೇಶಗಳಲ್ಲದೆ ಹಲವಾರು ದೇಶದಲ್ಲಿ ಸಮಾರಂಭಗಳಲ್ಲಿ ಹಾಡಿದ್ದಾರೆ.

ಸಂಗೀತಗಾರರ ಜೊತೆ ಭಾರತದ ಎಲ್ಲೆಡೆ ಸಂಗೀತ ಕಛೇರಿಗಳಲ್ಲಿ ಭಾಗವಹಿಸಿದ್ದಾರೆ.

# ಪ್ರೊಫೆಸರ್ ನರೇಂದ್ರ ಎಲ್.ನಾಯಕ್

**ಕಿರು ಪರಿಚಯ**



ಪ್ರೊಫೆಸರ್ ನರೇಂದ್ರ ಎಲ್.ನಾಯಕ್ ರವರ ಹುಟ್ಟಿದೂರು ಉಡುಪಿಯ ಸಾಸ್ತಾನ್. ಮೈಸೂರು ವಿಶ್ವವಿದ್ಯಾಲಯದಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವಿ ಪಡೆದ ಇವರು ಮುಂದೆ ಎನ್ ಐ ಟಿ ಸುರತ್ಕಲ್ ನಲ್ಲಿ 1987ರಿಂದ ಅಧ್ಯಾಪಕರಾಗಿ ಸೇವೆಸಲ್ಲಿಸಿದರು. ಅದೇ ಸಮಯದಲ್ಲಿ ಈಗ ಬಹಳ ಪ್ರಸಿದ್ಧಿ ಹೊಂದಿರುವ ಎಕ್ಸ್ಪರ್ಟ್ ಕೋಚಿಂಗ್ ಕ್ಲಾಸ್ ಗಳನ್ನು ಚಿಕ್ಕದಾಗಿ ಶುರು ಮಾಡಿದರು.

ಎಕ್ಸ್ಪರ್ಟ್ ಎಡ್ಯುಕೇಶನಲ್ ಮತ್ತು ಚಾರಿಟಬಲ್ ಫೌಂಡೇಶನ್ ಸಂಸ್ಥೆಯ ಚೇರ್ಮನ್ ಆಗಿರುವ ಪ್ರೊ. ನಾಯಕರು, ತಮ್ಮ ಸಂಸ್ಥೆಯ ಮೂಲಕ ಹಲವರಿಗೆ ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳಲ್ಲಿ ಸಹಾಯ ಮಾಡಿದ್ದಾರೆ.

ಕಳೆದ2 ದಶಕಗಳಿಂದ ಮುಂಚೂಣಿಯಲ್ಲಿರುವ ಎಕ್ಸ್ಪರ್ಟ್ ಸಂಸ್ಥೆಯು ಈಗ ಎಕ್ಸ್ಪರ್ಟ್ ಕೋಚಿಂಗ್ ಕ್ಲಾಸಸ್, ಎಕ್ಸ್ಪರ್ಟ್ ಪದವಿ ಪೂರ್ವ ಕಾಲೇಜ್, ಎಕ್ಸ್ಪರ್ಟ್ ಪೋಸ್ಟಲ್ ಕೋಚಿಂಗ್ ಹಾಗು ಎಕ್ಸ್ಪರ್ಟ್ ಪ್ರಕಾಶನಗಳನ್ನು ಹೊಂದಿದೆ.

ಪ್ರೊ ನಾಯಕ್ ರವರನ್ನು ಹಲವು ಸಂಸ್ಥೆಗಳು ಅವರ ಕೊಡುಗೆಗಾಗಿ ಗೌರವಿಸಿ ಪುರಸ್ಕರಿಸಿವೆ.ಅವರಿಗೆ ವಿಧ್ಯಾಭ್ಯಾಸ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿನ ನಿಪುಣತೆಗಾಗಿ, ಅಖಿಲ ಭಾರತೀಯ ವಾಣಿಜ್ಯೋಧ್ಯಮ ಮತ್ತು ಸಮುದಾಯ ಸಂಸ್ಥೆ "ಭಾರತ್ ಗೌರವ್" ಪ್ರಶಸ್ತಿ ಕೊಟ್ಟಿದ್ದಾರೆ, ಅಲ್ಲದೇ ಇಂಡಿಯನ್ ಎಕನೋಮಿಕ್ ರಿಸರ್ಚ್ ಅಂಡ್ ಡೆವಲಪ್ಮೆಂಟ್ ಅಸೋಸಿಯೇಷನ್ ಕೂಡಾ "ನ್ಯಾಷನಲ್ ಅವಾರ್ಡ್ ಫಾರ್ ಎಕ್ಸಲೆನ್ಸ್ ಇನ್ ಎಡ್ಯುಕೇಷನ್" ಪ್ರಶಸ್ತಿ ನೀಡಿದೆ.

ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಹಾಗೂ ಔದ್ಯೋಗಿಕ ವಿಷಯಗಳಲ್ಲಿ ಮಾರ್ಗದರ್ಶನ ನೀಡುವುದರಲ್ಲಿ ಪ್ರಸಿದ್ಧಿ ಪಡೆದ ಪ್ರೊ ನಾಯಕ್ ರವರು ಕಳೆದ ವರ್ಷ 17ನೇ ಫೆಬ್ರವರಿ ಯಂದು ಕುವೈತ್ ಕನ್ನಡ ಕೂಟ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಹಾಗೂ ಪೋಷಕರಿಗೆ ಹಲವು ಉಪಯುಕ್ತ ಮಾಹಿತಿಗಳನ್ನು ನೀಡಿದ್ದರು.

ಪ್ರೊ ನಾಯಕ್ ರವರು ಸಂಗೀತ ಭಾರತಿ ಫೌಂಡೇಶನ್ ನಲ್ಲಿ ಉಪಾಧ್ಯಕ್ಷರಾಗಿ, ಮಂಗಳೂರು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತಾಸಕ್ತಿಯನ್ನು ಜನಪ್ರಿಯಗೊಳಿಸುವಲ್ಲಿ ಮುಂದಾಳಾಗಿದ್ದಾರೆ. ಬಾಲ್ಯದಿಂದಲೇ ಸಂಗೀತದಲ್ಲಿ ಆಸಕ್ತಿ ಇದ್ದ ಇವರು, ಆಕಾಶವಾಣಿ ಮತ್ತು ದೂರದರ್ಶನಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಉನ್ನತ ಶ್ರೇಣಿಯ ಕಲಾವಿದರು. ಭಾರತ ಮತ್ತು ವಿದೇಶಗಳಲ್ಲಿ ಸುಮಾರು ಐನೂರಕ್ಕೂ ಹೆಚ್ಚು ಕಾರ್ಯಕ್ರಮದಲ್ಲಿ ಹಾರ್ಮೋನಿಯಮ್ ಅನ್ನು ನುಡಿಸಿದ್ದಾರೆ.

ಪಂಡಿತ್ ರಾಜನ್ ಮಿಶ್ರಾ ಮತ್ತು ಸಾಜನ್ ಮಿಶ್ರಾ, ಉಸ್ತಾದ್ ಮಶ್ಕೂರ್ ಆಲಿ ಖಾನ್, ಪಂಡಿತ್ ವೆಂಕಟೇಶ್ ಕುಮಾರ್, ಪಂಡಿತ್ ಜಯತೀರ್ಥ ಮೇವುಂಡಿ, ಶ್ರೀಮತಿ ಆರತಿ ಅಂಕಲೀಕರ್ ಟಿಕೇಕರ್, ಶ್ರೀಮತಿ ಸಂಗೀತ ಕಟ್ಟಿ, ಶ್ರೀ ಪುತ್ತೂರು ನರಸಿಂಹ ನಾಯಕ್, ಪಂಡಿತ್ ಉಪೇಂದ್ರ ಭಟ್, ಶ್ರೀ ಶಂಕರ್ ಶಾನಭೋಗ್ ಹೀಗೆ ಹಲವು ಪ್ರಖ್ಯಾತ ಗಾಯಕರಿಗೆ ಹಾರ್ಮೋನಿಯಮ್ ನುಡಿಸಿದ್ದಾರೆ.

ಪ್ರೊ ನಾಯಕ್ ರವರ ಧರ್ಮಪತ್ನಿ ಶ್ರೀಮತಿ ಉಷಾಪ್ರಭಾ ನಾಯಕ್, ಪತಿಯ ಪ್ರತಿಹೆಜ್ಜೆಯಲ್ಲೂ ಪ್ರೋತ್ಸಾಹಿಸುತ್ತಾ ಭಾಗಿಯಾಗಿದ್ದಾರೆ. ಇವರಿಗೆ ತಕ್ಕಂತೆ ಮಗನಾದ ಅಂಕುಶ್ ಕೂಡ ಸಿತಾರ್ ವಾದನದಲ್ಲಿ ಮುನ್ನಡೆ ಇಟ್ಟಿರುವುದು ಶ್ಲಾಘನೀಯ, ಅವರು ಎನ್ ಐ ಟ್ ಸೂರತ್ಕಲ್ ನಲ್ಲಿ ವಿಧ್ಯಾಭ್ಯಾಸ ಮಾಡುತ್ತಿದ್ದಾರೆ.



ಶ್ರೀಕೇಶವ್ ಜೋಶಿಯವರು ಸಂಗೀತಾ ಸಕ್ತಿಯುಳ್ಳ ಮನೆತನದಲ್ಲಿ 1980 ರಲ್ಲಿ ಜನಿಸಿದರು. ಅವರು ತಮ್ಮ ಕಲಾ ಸೇವೆಯನ್ನು ತಬಲ ಕಲಿಯುವ ಮೂಲಕ ತಮ್ಮ 8ನೇ ವಯಸ್ಸಿನಲ್ಲಿಯೇ ಪ್ರಾರಂಭಿಸಿದರು. ತಮ್ಮ ಸಂಗೀತಾಭ್ಯಾಸವನ್ನು ಶ್ರೀ ಆರ್. ಎಂ. ಮೋರೆ (ನಟರಾಜ ಸಂಗೀತ ವಿದ್ಯಾಲಯ, ಬಾಗಲಕೋಟೆ) ಅವರ ಬಳಿ ಹತ್ತು ವರ್ಷಗಳ ಕಾಲ ಕಲಿತರು. ನಂತರ ಲೇ॥ ಶ್ರೀ ಪಂಡಿತ್ ಕರವೀರ್ ಮಲ್ಲಾಪುರ್ ಹಾಗು ತದನಂತರ ಬನಾರಸ್ ಘರಾನದ ಸುಪ್ರಸಿದ್ಧ ಕಲಾವಿದರಾದ ಪಂಡಿತ್ ಈಶ್ವರ್ ಲಾಲ್ ಮಿಶ್ರ ಅವರ ಬಳಿ ಮುಂದುವರೆಸಿದರು.

ಶ್ರೀ ಕೇಶವ್ ಜೋಶಿಯವರಿಗೆ ಸಂದಿರುವ ಕೆಲವು ಪ್ರಮುಖ ಪ್ರಶಸ್ತಿಗಳೆಂದರೆ:

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅವರಿಂದ ಎರಡು ವರ್ಷದ (1999-2000) ವಿದ್ಯಾರ್ಥಿವೇತನ

ನಾಗಪುರದ ಸೌಥ್ ಸೆನ್ಟ್ರಲ್ ಕಲ್ಚರಲ್ ಸೆಂಟರ್ ಕರ್ನೂಲ್ ನಲ್ಲಿ ಆಯೋಜಿಸಿದ್ದ ಯುವ ಸಂಗೀತ ಉತ್ಸವದಲ್ಲಿ ಮೊದಲನೇ ಬಹುಮಾನ

ಅಖಿಲ ಭಾರತೀಯ ಗಂಧರ್ವ ಮಹಾ ವಿದ್ಯಾಲಯ, ಮಂಡಲ್ ಮಿರಾಜ್ ಇವರಿಗೆ 2001ರಲ್ಲಿ "ತಬಲ ಅಲಂಕಾರ್" ಎಂಬ ಬಿರುದು

ಶ್ರೀ ಕೇಶವ್ ಜೋಶಿಯವರು ಆಕಾಶವಾಣಿ, ದೂರದರ್ಶನ ಹಾಗೂ ಖಾಸಗಿ ವಾಹಿನಿಗಳ ಹಲವಾರು ಸಂಗೀತ ಕಛೇರಿಗಳಲ್ಲಿ ಭಾಗವಹಿಸಿದ್ದಾರೆ. ಶ್ರೀಯುತರು ಪಂಡಿತ್ ಎಂ. ವೆಂಕಟೇಶ್ ಕುಮಾರ್, ಪಂಡಿತ್ ಜಯತೀರ್ಥ ಮೇವುಂಡಿ, ಶ್ರೀಮತಿ ಅಶ್ವಿನಿ ಭಿಡೆ, ಶ್ರೀಮತಿ ಆರತಿ ಅಂಕಾಲಿಕರ್, ಪಂಡಿತ್ ಅಜಯ್ ಪೊಹಂಕರ್, ಶ್ರೀಮತಿ ಕಲ್ಪನ ಝೊಕರ್ಕರ್, ಉಸ್ತಾದ್ ಬಾಳೆಖಾನ್, ಪಂಡಿತ್ ಅರವಿಂದ್ ಥಟ್ಟೆ, ಶ್ರೀರಾಮ್ ಪರಶುರಾಮ್ ಮತ್ತು ಅನುರಾಧ ಶ್ರೀರಾಮ್ (ಕರ್ನಾಟಕ್ ಮತ್ತು ಹಿಂದುಸ್ತಾನಿ ಗಾಯನ ಜುಗಲ್ ಬಂದಿ), ಶ್ರೀ ರಘುನಂದನ್ ಫಣಿಶಿಕರ್, ಪಂಡಿತ್ ಗಣಪತಿ ಭಟ್, ಪಂಡಿತ್ ವಿನಾಯಕ್ ತೊರ್ವಿ, ಉಸ್ತಾದ್ ಶಾತಿಕ್ ಖಾನ್, ಪಂಡಿತ್ ಪ್ರವೀಣ್ ಗೋಡ್ಖಿಂಡಿ, ಉಸ್ತಾದ್ ಫಯಾಜ್ ಖಾನ್, ಡಾ॥ ಪ್ರಕಾಶ್ ಸೋನ್ಟಕ್ಕೆ ಹಾಗು ಹಲವಾರು ಸುಪ್ರಸಿದ್ಧ ಸಂಗೀತಗಾರರ ಜೊತೆ ಭಾರತದ ಎಲ್ಲೆಡೆ ಸಂಗೀತ ಕಛೇರಿಗಳಲ್ಲಿ ಭಾಗವಹಿಸಿದ್ದಾರೆ.

## ಒಂದೆರಡು ಸಾಲಿನ ತುಂಡು ಕಥೆಗಳು

ಸುರೇಶ ಬಿ.ಎಸ್

### ಕಟುಕತನ

ಸುಸಂಸ್ಕೃತ ನಾಗರಿಕರಿರುವ ನಗರದ ಜನನಿಬಿಡ ರಸ್ತೆ ಬದಿಯ ಕಲುಷಿತ ಮೋರಿಯಲಿ ಸಿಲುಕಿದ ನಾಯಿ ಮರಿಯೊಂದು ಹೊರಬರಲು ಹಲವು ತಾಸುಗಳಿಂದ ಕುಂಯ್ ಗುಟ್ಟು ಹೆಣಗುತ್ತಿದ್ದ ನೋಡಿದಾಕ್ಷಣ ಎತ್ತಿ... ಎದೆಗೊತ್ತಿ ಆರೈಕೆ ಮಾಡಿದ್ದು ಕಡೇ ಬೀದಿ, ಮೂಲೆ ಅಂಗಡಿಯ "ಕಟುಕ"!!?

### ಅತಿಯಾದ ಆಚಾರ!

ಸ್ವಚ್ಛಂದ ಕಾನನದ ಹುಲುಸಾದ ಹುಲ್ಲ, ನಲಿದಾಡಿ ಸವಿಯುತಲಿದ್ದ ಹುಲ್ಲೆಯ ಮೇಲೆ ಹಲ್ಲೆ ಮಾಡಿದ ರಣಹದ್ದುಗಳಿಗೆ ಉಕ್ಕಿನ ಕೊಕ್ಕು-ನಖಗಳ ತೊಡಿಸಿ, ಕಿರಾತಕರ ಅಟ್ಟಹಾಸವ ಕಂಡು ಬೆದರಿ ನೆಗೆದಾಡಿದ ಜೀವಂತ ಹರಿಣಿಯ ಗರ್ಭದಿ ಕರುಳ ಬಗೆದು, ಜೀವಚ್ಛವ ಮಾಡಿ, ನರಳಿ ನರಳಿ ಕೊನೆಯುಸಿರೆಳೆಯುವಂತೆ ಮಾಡಿದ್ದು ಈ ಹುಲುಮನುಜರಲ್ಲವೆ? ಇಂತಹ ಹೋಲಿಕೆಯ ಹಕ್ಕಿಗಳಿಗೆಲ್ಲ ಗೊತ್ತು ಇಷ್ಟೊಂದು ಅತಿಯಾದ ದುರಾಚಾರ... ಧಿಕ್ಕಾರವಿರಲಿ... ಅಂಡಲೆವ ಲಂಪಟ ತೊಟ್ಟಿ ಮನಕ್ಕೆ!

### ಆತುರದ ಅವಿವೇಕ

ಆತನಿಗೊಪ್ಪಿಸಿಕೊಂಡ ಆಕೆ ತನ್ನವರೆನ್ನೆಲ್ಲಾ ಬಿಟ್ಟು ಓಡಿ ಹೋಗಲು ಮೂರುಹಾದಿ ಕೂಡುವಲ್ಲಿ ತುದಿಗಾಲಿನಲ್ಲಿ ಕಾದಿದ್ದಳು... ಆತ ಬರಲೇ ಇಲ್ಲ... ಹಿಂದೆ ಹೋಗಲಿಚ್ಛಿಸದೆ ಅಡ್ಡದಾರಿ ಹಿಡಿದಳು...

### ದೂರದರ್ಶಿ

ಗುರುಗಳು ತಮ್ಮ ಅತೀ ಬುದ್ಧಿವಂತ ಶಿಷ್ಯನಿಗೆ ಹೇಳಿದರು "ನೀನು ಇನ್ನೂ ಚೆನ್ನಾಗಿ ಓದಿದರೆ ವಿದೇಶಕ್ಕೆ ಹೋಗಿ ನಮ್ಮ ದೇಶಕ್ಕೆ ಹೆಸರು ತರಬಹುದು..." ಶಿಷ್ಯನೆಂದ... "ನಾನು, ಇಲ್ಲೇ ಇದ್ದು ದೇಶದ ಹೆಸರಿಗಿಂತ ಈ ನಾಡನ್ನು ಮುಂದೆ ತರಲು ಏನ ಮಾಡಬೇಕು ಅದ ಹೇಳಿ..."

### ಅಮೃತವರ್ಷಿಣಿ

ಕೂಳು ಸಿಕ್ಕಿದ್ದೇ ತಡ, ಆಕೆ ಹಸಿವಿನಿಂದ ಕಂಗೆಟ್ಟು ಚೀರಾಡುತ್ತಿದ್ದ ಮಗುವಿಗೆ ಒಂದು ತುತ್ತೂ ಕೊಡದೇ ತಾನೊಬ್ಬಳೇ ಉಂಡು... ನಂತರವೇ ಹಾಲೂಡಿಸಿದಳು...

ತಾಯಿ ತಿಂದ ಅನ್ನ ಹಳಸಿತ್ತು...
ಆದರೆ ಮಗುವಿಗೆ ಅದೇ ಅಮೃತವಾಗಿ ಮಾರ್ಪಟ್ಟಿತ್ತು...

### ಚುಟುಕ

ಮತ್ತೊಂದು Sorry!
=============

ಜರತಾರಿ ಸಾರಿಯ ಸೆರಗು ಸರಿಯಿತು ಜಾರಿ ಜಾರಿ!

ಅದನುಟ್ಟ ನಾರಿ ಸರಿಪಡಿಸುತಲುಲಿದಳು 'ಸಾರಿ' I am 'ಸಾರೀ'!

ಎದುರಿಗಿದ್ದ ಸಭ್ಯ ಗುಂಡ ಬಳಿಸಾರಿ ಉಸುರಿದ 'ಸಾರಿ' ಮತ್ತೊಂದು 'ಸಾರಿ'ಲೀ!

## ರಾಮಧ್ಯಾನ

ಪುಟ್ಟಾಣಿ ಮಕ್ಕಳೆ, ನಾನು ಇಂದು ನಿಮಗೆಲ್ಲಾ, ಪುರಂದರದಾಸರು ಬರೆದಿರುವ ಒಂದು ಕಥೆ ಹೇಳುತ್ತೇನೆ. ಒಂದು ಸಲ ಧಾನ್ಯಗಳಲ್ಲಿ ಅತ್ಯಂತ ಶ್ರೇಷ್ಟವಾದ ಧಾನ್ಯ ಯಾವುದು ಎಂಬುದರ ಬಗ್ಗೆ ವಾದ-ವಿವಾದ ನಡೆಯಿತು.

ಆಗ ಭತ್ತ ಮತ್ತು ರಾಗಿಯ ನಡುವೆ ವಾದ ಶುರುವಾಯಿತು, ಭತ್ತ ಧಾನ್ಯಗಳಲ್ಲಿ ನಾನೇ ಶ್ರೇಷ್ಟ, ನನ್ನನ್ನು ಶ್ರೀಮಂತರು, ರಾಜರು ಹಾಗೂ ದೇವತೆಗಳು ಉಪಯೋಗಿಸುತ್ತಾರೆ, ಅದಕ್ಕೆ ನಾನೇ ಶ್ರೇಷ್ಟ ಎಂದು ಭತ್ತ ವಾದಿಸಿತು.

ರಾಗಿ ಹೇಳಿತು ನನ್ನನ್ನು ಮಧ್ಯಮ ವರ್ಗದವರು, ಕಡು ಬಡವರು ಉಪಯೋಗಿಸುತ್ತಾರೆ ನನ್ನಿಂದ ಅವರ ಜೀವ ಉಳಿಯುತ್ತದೆ, ಆದ್ದರಿಂದ ನಾನೇ ಶ್ರೇಷ್ಟ ಎಂದು ವಾದಿಸಿತು. ಕೊನೆಗೆ ತಮ್ಮ ವಾದವನ್ನು ಶ್ರೀರಾಮಚಂದ್ರನ ಬಳಿಗೆ ತೆಗೆದುಕೊಂಡು ಹೋದರು. ಶ್ರೀರಾಮಚಂದ್ರ ಭತ್ತ ಮತ್ತು ರಾಗಿಯ ವಾದ-ವಿವಾದನ್ನು ಕೇಳಿ

ಇಬ್ಬರನ್ನೂ, 6 ತಿಂಗಳ ಕಾಲ ಕಾರಾಗೃಹದಲ್ಲಿ ಹಾಕಿ ಎಂದು ಸೈನಿಕರಿಗೆ ಆದೇಶಿಸಿದನು. ಶ್ರೀರಾಮಚಂದ್ರ 6 ತಿಂಗಳ ಕಾಲ ಕಳೆದ ನಂತರ ಭತ್ತ ಮತ್ತು ರಾಗಿಯನ್ನು ನೋಡಲು ಕಾರಾಗೃಹಕ್ಕೆ ಬಂದನು, ಭತ್ತವೆಲ್ಲಾ ಜೊಳ್ಳು ಆಗಿತ್ತು, ರಾಗಿ ಮಾತ್ರ ಚೆನ್ನಾಗಿತ್ತು.

ಶ್ರೀರಾಮಚಂದ್ರ ರಾಗಿಯನ್ನು ಸರ್ವಶ್ರೇಷ್ಟ ಧಾನ್ಯ ಎಂದು ತೀರ್ಪಿತ್ತನು. ಅಷ್ಟೇ ಅಂದಿನಿಂದ ರಾಗಿಗೆ ರಾಮಧಾನ್ಯ ಎಂಬ ಮತ್ತೊಂದು ಹೆಸರು ಬಂತು. ಮುಂದಿನ ಸಂಚಿಕೆಯಲ್ಲಿ ಮತ್ತೊಂದು ಕಥೆಯನ್ನು ಹೇಳುತ್ತೇನೆ.

# ಉಡುಪಿ ಶ್ರೀ ಕೃಷ್ಣ ಮತ್ತು ಪರ್ಯಾಯ

ಸಂಗ್ರಹಣೆ- ಕಿರಣ್ ಭಟ್



ಉಡುಪಿ ನಮ್ಮ ನೈಋತ್ಯ ಭಾರತದಲ್ಲಿರುವ ಕರ್ನಾಟಕ ರಾಜ್ಯದ, ಪರಶುರಾಮ ಕ್ಷೇತ್ರದ ಕಡಲ ತೀರದಲ್ಲಿರುವ ಒಂದು ಸುಂದರ ಪಟ್ಟಣ. ಈ ಪಟ್ಟಣದಲ್ಲಿರುವ ಶ್ರೀ ಕೃಷ್ಣ ದೇವಾಲಯವು ಯಾರಿಗೆ ತಾನೇ ತಿಳಿದಿಲ್ಲ,

ಉಡುಪಿ ಶ್ರೀ ಕೃಷ್ಣ ದೇಗುಲ ಪ್ರಪಂಚದಾದ್ಯಂತ ಹೆಸರು ಗಳಿಸಿದೆ. ಉಡುಪಿಯ ಮೂಲ ಸಂಸ್ಕೃತ ನಾಮ 'ರಜತ ಪೀಠ' ಅಥವಾ "ರೌಪ್ಯ ಪೀಠ" ಎಂದು. ಈ ಪಟ್ಟಣದ ಹೃದಯ ಭಾಗದಲ್ಲಿ ರಥ ಬೀದಿ ಇದೆ, ಈ ರಥ ಬೀದಿಯಲ್ಲಿ ಮೂರು ದೇಗುಲಗಳಿವೆ, ಮೊದಲಾಗಿ ಶ್ರೀ ಅನಂತೇಶ್ವರ ದೇವಸ್ಥಾನ, ಎರಡನೆಯದಾಗಿ ಶ್ರೀ ಚಂದ್ರಮೌಳೀಶ್ವರ ದೇವಸ್ಥಾನ ಮತ್ತು ಮೂರನೆಯದಾಗಿ ಶ್ರೀ ಕೃಷ್ಣ ಮಠ. ಶ್ರೀ ಕೃಷ್ಣ ಮಠವನ್ನು 13ನೇ ಶತಮಾನದಲ್ಲಿ ಶ್ರೀ ಮಧ್ವಾಚಾರ್ಯರು ಸ್ಥಾಪಿಸಿದರು. ನಂಬಿಕೆಯ ಪ್ರಕಾರ, ಒಂದು ಹಡಗು ಚಂಡಮಾರುತದ ತೊಂದರೆಯಲ್ಲಿ ಸಿಕ್ಕಿರುವುದನ್ನು ಕಂಡ ಶ್ರೀ ಮಧ್ವಾಚಾರ್ಯರು, ಹಡಗು ಸುರಕ್ಷಿತವಾಗಿ ದಡ ಸೇರಲು ಸಹಾಯಮಾಡಿದರು. ಆ ಹಡಗಿನ ನಾವಿಕರು ಶ್ರೀ ಮಧ್ವಾಚಾರ್ಯರಿಗೆ ಬಹಳ ಕೃತಜ್ಞರಾಗಿ ಅವರಿಗೆ ಒಂದು ಗೋಪಿ ಚಂದನದ ಮೂಟೆಯನ್ನು ಕಾಣಿಕೆಯಾಗಿ ನೀಡಿದರು.

ಆ ಗೋಪಿ ಚಂದನದಲ್ಲಿ ಬಲರಾಮನ ಮತ್ತು ಶ್ರೀ ಕೃಷ್ಣನ ವಿಗ್ರಹ ಸಿಕ್ಕಿತು, ಬಲರಾಮನ ವಿಗ್ರಹವನ್ನು ಕಡಲ ತೀರದಲ್ಲಿ (ಈಗಿನ ವಡಭಾಂಡೇಶ್ವರದಲ್ಲಿ) ಪ್ರತಿಷ್ಠಾಪನೆ ಮಾಡಿ, ಶ್ರೀ ಕೃಷ್ಣನ ವಿಗ್ರಹವನ್ನು ಉಡುಪಿಗೆ ತಂದು ಅಲ್ಲಿ ಪ್ರತಿಷ್ಠಾಪನೆ ಮಾಡಿದರು. ಅದುವೇ ಉಡುಪಿಯಲ್ಲಿರುವ ಈಗಿನ ಶ್ರೀ ಕೃಷ್ಣ ಮಠದಲ್ಲಿ ನಿತ್ಯ ಪೂಜೆ ಮಾಡುತ್ತಿರುವ ಶ್ರೀ ಕೃಷ್ಣ ದೇವರ ವಿಗ್ರಹ. ಆ ಶ್ರೀ ಕೃಷ್ಣನ ಒಂದು ಕೈಯಲ್ಲಿ ಕೋಲು ಮತ್ತು ಇನ್ನೊಂದು ಕೈಯಲ್ಲಿ ಬೆಣ್ಣೆ ಮುದ್ದೆ ಇದೆ.

ಉಡುಪಿ ಪದ ಕೇಳುವಾಗ ನೆನಪಿಗೆ ಬರುವುದು ಎರಡು ವಿಷಯಗಳು, ಮೊದಲನೆಯದಾಗಿ ರುಚಿಕರವಾದ ಸಸ್ಯಾಹಾರಿ ಆಹಾರ ಮತ್ತು ಎರಡನೆಯದಾಗಿ ಶ್ರೀ ಕೃಷ್ಣ ದೇವಸ್ಥಾನ. ಈ ವಿಶೇಷ ಪಾಕಪದ್ಧತಿಯು ಕೃಷ್ಣ ಮಠಕ್ಕೆ ಸಂಬಂಧಿಸಿದೆ, ಶ್ರೀ ಕೃಷ್ಣನಿಗೆ ಪ್ರತಿದಿನ ವಿವಿಧ ಖಾದ್ಯದ ನೈವೇದ್ಯ ಅರ್ಪಣೆ ಮತ್ತು ಚಾತುರ್ಮಾಸ ಸಮಯದಲ್ಲಿ (ಮಳೆಗಾಲದಲ್ಲಿ ನಾಲ್ಕು ತಿಂಗಳ ಅವಧಿಯಲ್ಲಿ) ಪದಾರ್ಥಗಳ ಮೇಲಿನ ಕೆಲವು ನಿರ್ಬಂಧಗಳು ಇವೆ. ವಿವಿಧ ಅವಶ್ಯಕತೆಗಳನ್ನು ಸೇರಿಕೊಂಡು ಈ ನಿರ್ಬಂಧಗಳನ್ನು ವಿಶೇಷವಾಗಿ ಕಾಲಿಕ ಮತ್ತು ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳನ್ನು ಸಂಯೋಜಿಸುವುದು ಖಾದ್ಯಗಳಲ್ಲಿ, ನಾವೀನ್ಯತೆಗೆ ಕಾರಣವಾಯಿತು. ಈ ತಿನಿಸುಗಳನ್ನು ಶಿವಳ್ಳಿ ಮಾಧ್ವ ಬ್ರಾಹ್ಮಣರು ಶ್ರೀ ಕೃಷ್ಣನಿಗಾಗಿ ಅಭಿವೃದ್ಧಿಪಡಿಸಿದರು

ಉಡುಪಿ ಪಾಕಪದ್ಧತಿಯ ಪರಿಣತಿಯನ್ನು ಉಪಾಹರಗೃಹಗಳು ಭಾರತದ ಉದ್ದಗಲಕ್ಕೂ ಸುಮಾರು ಅತ್ಯಂತ ಮೆಟ್ರೋಪಾಲಿಟನ್ ಮತ್ತು ದೊಡ್ಡ ನಗರಗಳಲ್ಲಿ ವ್ಯಾಪಕವಾಗಿರುವುದನ್ನು ಕಾಣಬಹುದು.



## ಶ್ರೀ ಮಧ್ವಾಚಾರ್ಯರು ಯಾರು ?

ಅವರು ಶಿವಳ್ಳಿ-ಬ್ರಾಹ್ಮಣರ ಒಂದು ಕುಟುಂಬದ ಶ್ರೀ ಮಧ್ಯಗೇಹ ಭಟ್ಟ ಮತ್ತು ಶ್ರೀಮತಿ ವೇದಾವತಿ ದೇವಿಯ ಮಗ. (1238-1317) ಮಧ್ವಾಚಾರ್ಯರ ಹುಟ್ಟು ಹೆಸರು ವಾಸುದೇವ. ಉಡುಪಿಯ ಹತ್ತಿರದ ಪಾಜಕವೆಂಬ ಗ್ರಾಮದಲ್ಲಿ ವಿಜಯ ದಶಮಿ ದಿನದಂದು ಇವರ ಜನನ. ಅವರು ಐದು ವರ್ಷದವರಿದ್ದಾಗ, ಬ್ರಹ್ಮೋಪದೇಶ ನೀಡಲಾಯಿತು.

ಅವರ ಹನ್ನೆರಡನೆಯ ವಯಸ್ಸಿನಲ್ಲಿ ತನ್ನ ತಂದೆಗೆ ಒಪ್ಪಿಗೆ ಇಲ್ಲದಿದ್ದರೂ ಮಹಾನ್ ವಿದ್ವಾಂಸ ಶ್ರೀ ಅಚ್ಯುತ-ಪ್ರಜ್ಞ ರಿಂದ ಸನ್ಯಾಸ ದೀಕ್ಷೆ ಸ್ವೀಕರಿಸಿದರು. ಒಂದು ತಿಂಗಳಲ್ಲಿಯೇ ಬಾಲಕ ಪೂರ್ಣ ಪ್ರಜ್ಞರು ವಾಸುದೇವ-ಪ್ರಜ್ಞಾ ಪಂಡಿತರ ನೇತೃತ್ವದ ತರ್ಕ ವಿದ್ವಾಂಸರ ಗುಂಪನ್ನು ಸೋಲಿಸಿದರು. ಅವರ ಅಕಾಲ ಪ್ರೌಢ ಪ್ರತಿಭೆ ಕಂಡು ಅತ್ಯಾನಂದದಿಂದ ಅಚ್ಯುತ-ಪ್ರಜ್ಞರು ವೇದಾಂತ ಸಾಮ್ರಾಜ್ಯದ ಮುಖ್ಯಸ್ಥನನ್ನಾಗಿ ಪ್ರದಾನಿಸಿ ಅವರಿಗೆ ಆನಂದ ತೀರ್ಥ ಎಂಬ ಬಿರುದು ಕೊಟ್ಟರು.

ಇನ್ನೂ ಮಗುವಾಗಿದ್ದಾಗ, ವಾಸುದೇವ ಎಲ್ಲಾ ಆಧ್ಯಾತ್ಮಿಕ ವಿಷಯಗಳಲ್ಲಿ ಅಕಾಲ ಪ್ರೌಢ ಪ್ರತಿಭೆ ಪ್ರದರ್ಶಿಸಿದರು. ಉಪದೇಶಕ ಹುಡುಗ ವಾಸುದೇವನನ್ನು ಪ್ರಾರಂಭದ ಸಮಯದಲ್ಲಿ ಪೂರ್ಣಪ್ರಜ್ಞಾ ಹೆಸರನ್ನು ನೀಡಿದರು, ಅಲ್ಲದೇ ಅವರನ್ನು ತೀರ್ಥರೆಂದೂ ಕರೆಯುತ್ತಿದ್ದರು. ಆನಂದ ತೀರ್ಥರು ಮಧ್ವ ಮತ / ದ್ವೈತ ಸಿದ್ಧಾಂತ ಭಾರತಾದದ್ಯಂತ ಸಾರಿದರು.

ಜನಪ್ರಿಯವಾಗಿ ಹಿಂದೂ ತತ್ವಶಾಸ್ತ್ರದ ದ್ವೈತ (ದ್ವಿರೂಪತೆಯ) ಶಾಲೆಯ ತತ್ತ್ವವಾದದ "ಸತ್ಯದ ತತ್ವಶಾಸ್ತ್ರ" ಮುಖ್ಯ ಪ್ರತಿಪಾದಕರಾಗಿದ್ದರು. ಮಧ್ವಾಚಾರ್ಯ ಭಕ್ತಿ ಚಳುವಳಿಯ ಮುಖ್ಯ ತತ್ವಜ್ಞಾನಿಗಳಲ್ಲಿ ಒಬ್ಬರು. ಅವರು ಸಾಮಾನ್ಯ ರೂಢಿಯ ವಿರುದ್ಧ ಹೋಗುವುದರಲ್ಲಿ, ಅನೇಕ ವಿಧಗಳಲ್ಲಿ ಮೊದಲಿಗರು.

ದೇಶದ ವಿವಿಧ ಪ್ರದೇಶಗಳಲ್ಲಿ ಹಲವಾರು ಶಿಷ್ಯರು ಮಧ್ವಾಚಾರ್ಯರಿಂದ ಸನ್ಯಾಸ ದೀಕ್ಷಾ ಪಡೆದಿದ್ದರು. ಅವರಲ್ಲಿನ ಎಂಟು ಶಿಷ್ಯಾನುಯಾಯಿಗಳನ್ನು ಆಯ್ಕೆ ಮಾಡಿ, ವಿವಿಧ ಮಠಗಳ ಮಠಾಧೀಶರಾಗಿ ಉಡುಪಿಯಲ್ಲಿ ಉಳಿದು, ಉಡುಪಿ ಶ್ರೀ ಕೃಷ್ಣ ಮಠದ ಪೂಜೆ ಮತ್ತು ಪುನಸ್ಕಾರವನ್ನು ಹಸ್ತಾಂತರಿಸಿದರು. ಪ್ರಾರಂಭದ ಮೊದಲ ಎಂಟು ಮಠಾಧೀಶರು ಇವರು:

1. ಶ್ರೀ ಹೃಷಿಕೇಶ ತೀರ್ಥ (ಪಲಿಮಾರು ಮಠ)
2. ಶ್ರೀ ನರಸಿಂಹ ತೀರ್ಥ (ಅದಮಾರು ಮಠ)
3. ಶ್ರೀ ಜನಾರ್ದನ ತೀರ್ಥ (ಕೃಷ್ಣಾಪುರ ಮಠ)
4. ಶ್ರೀ ಉಪೇಂದ್ರ ತೀರ್ಥ (ಪುತ್ತಿಗೆ ಮಠ)
5. ಶ್ರೀ ವಾಮನ ತೀರ್ಥ (ಶಿರೂರು ಮಠ)
6. ಶ್ರೀ ವಿಷ್ಣು ತೀರ್ಥ (ಸೋದೆ ಮಠ)
7. ಶ್ರೀ ರಾಮ ತೀರ್ಥ (ಕಾಣಿಯೂರು ಮಠ)
8. ಶ್ರೀ ಅಧೋಕ್ಷಜ ತೀರ್ಥ (ಪೇಜಾವರ ಮಠ)

ಹಲವಾರು ಮಠ ಮತ್ತು ಮಠಾಧೀಶರನ್ನು ಅನುಸ್ಥಾಪಿಸಿದ ನಂತರ, ಅವರು ಜಿಲ್ಲಾ ಪ್ರವಾಸ ಮತ್ತು ಸಾರ್ವಜನಿಕ ಶಿಕ್ಷಣವನ್ನು ಸ್ವತಃ ಮಾಡತೊಡಗಿದರು. ತಮ್ಮ ಜೀವನದ 79 ನೇ ವರ್ಷದಲ್ಲಿ ತಮ್ಮ ಶಿಷ್ಯಂದಿರಿಗೆ, ತತ್ತ್ವವಾದ ಸಂಪ್ರದಾಯವನ್ನು ಮೇಲೆ ಒಯ್ಯುವ ಜವಾಬ್ದಾರಿ ನಿಯೋಜಿಸಲು ಮುಂದಾದರು. ಮಾಘ ಮಾಸದ ಉಜ್ವಲ ಅರ್ಧ ಒಂಬತ್ತನೇ ದಿನದಂದು 1317 ವರ್ಷ ಅವರು ಧ್ಯಾನಸ್ಥದಲ್ಲಿರುವಾಗ ಸ್ವತಃ ಜೀವಂತ ಅದೃಷ್ಯರಾದರು. ಅವರು ಇನ್ನೂ ಕೂಡ ಬದರಿಯಲ್ಲಿ ಶ್ರೀಮನ್ನಾರಾಯಣನ ಸೇವೆ ಮಾಡುತ್ತಿರುವರೆಂಬ ನಂಬಿಕೆ ಇದೆ. ಈ ಕಾರಣದಿಂದ ಎಲ್ಲೂ ಶ್ರೀಮಧ್ವಾಚಾರ್ಯರ ಬೃಂದಾವನ ಕಂಡು ಬರುವುದಿಲ್ಲ, ಶ್ರೀಗಳು ಅದೃಷ್ಯರಾದ ದಿನವನ್ನು ಶ್ರೀಮಧ್ವ ನವಮಿ ಎಂದು ಆಚರಿಸುತ್ತಾರೆ.

ಅವರು ಹಸ್ತಾಂತರಿಸಿದ ಶ್ರೀ ಕೃಷ್ಣ ಮಠ ಮತ್ತು ಅದರ ಸಂಪ್ರದಾಯವನ್ನು 8 ಮಠಾಧೀಶರು ಶ್ರದ್ಧಾ ಭಕ್ತಿಯಿಂದ ಆಚರಿಸುತ್ತಾ ಬಂದಿರುವರು. ಹಸ್ತಾಂತರ ಮಾಡುವಾಗ, ಪ್ರತೀ ಮಠಾಧೀಶರಿಗೆ ಶ್ರೀ ಕೃಷ್ಣ ಪೂಜೆಯ ಭಾಗ್ಯ ಸಿಗಲೆಂದು ಪರ್ಯಾಯವಾಗಿ ಮಾಡಲೆಂದು ಆದೇಶಿಸಿದ್ದರು.

## ಶ್ರೀ ವಾದಿರಾಜತೀರ್ಥ:

ಶ್ರೀ ವಾದಿರಾಜತೀರ್ಥರು (1480-1600) ಕುಂದಾಪುರ ತಾಲ್ಲೂಕಿನ, ಕುಂಭಾಶಿ ಬಳಿ ಹೂವಿನಕೆರೆ ಗ್ರಾಮದ ಶ್ರೀ ರಾಮಭಟ್ಟ ಮತ್ತು ಶ್ರೀಮತಿ ಗೌರಿಗೆ ಶ್ರೀ ವಾಗೀಶ ತೀರ್ಥರ ಅನುಗ್ರಹದಿಂದ ಜನಿಸಿದ ಮಗು. ಅವರ ಜನ್ಮ ನಾಮ "ಭೂವರಾಹ" ಎಂದು, ಕ್ರಮಾನುಗತವಾಗಿ ಶ್ರೀಮದ್ ಆನಂದ ತೀರ್ಥರ ನಂತರ ಬಂದ ಎರಡನೆಯ ಅತ್ಯುನ್ನತ ಸಂತ ಎಂದು ಪರಿಗಣಿಸಲಾಗಿದೆ, ಅಲ್ಲದೇ ಅವರು ದೊಡ್ಡ ಕವಿಗಳಾಗಿದ್ದರು. ಅವರು ಉಡುಪಿ ಶ್ರೀ ಕೃಷ್ಣ ಮಠದ ವ್ಯವಸ್ಥೆ ಮತ್ತು ಆಡಳಿತದಲ್ಲಿ ಅತ್ಯಂತ ಪರಿಣಾಮಕಾರಿ ವ್ಯವಸ್ಥೆಗೆ ಅನೇಕ ಬದಲಾವಣೆಗಳನ್ನು ತಂದಿರುವ ಕಾರಣ ಪ್ರೌಢ ಶ್ರೇಣಿ ಇರುವಿಕೆ ತೋರಿಸಿಕೊಟ್ಟಿತು.

# ಉಡುಪಿ ಶ್ರೀ ಕೃಷ್ಣ ಮತ್ತು ಪರ್ಯಾಯ

ಸಂಗ್ರಹಣೆ- ಕಿರಣ್ ಭಟ್



ಅವರು 8 ವಯಸ್ಸಿನಲ್ಲಿ ಸನ್ಯಾಸಿ ಆದರು. ಅವರು ಹಯಗ್ರೀವ ರೂಪದ ವಿಷ್ಣು ದೇವರನ್ನು ಪೂಜಿಸುತ್ತಿದ್ದರು. ವಾದಿರಾಜ ಯತಿಗಳ ಕಾಲ ಉಡುಪಿಯ ಸ್ವರ್ಣಯುಗವೆನ್ನಬಹುದು. ಇವರು 2 ತಿಂಗಳಿಗೊಮ್ಮೆ ಇದ್ದ ಉಡುಪಿ ಪರ್ಯಾಯ ಅಭ್ಯಾಸವನ್ನು ಎರಡು ವರ್ಷಕೊಮ್ಮೆ ಬದಲಾಯಿಸಿದರು. ಶ್ರೀ ವಾದಿರಾಜತೀರ್ಥರು, ಕನ್ನಡ ಭಾಷೆಗೆ ಪ್ರಮುಖ ಕೃತಿಗಳನ್ನು ಭಾಷಾಂತರಿಸುವ ಮೂಲಕ ಜನಸಾಮಾನ್ಯರಿಗೆ ಹರಿದಾಸ ಮತ್ತು ಮಧ್ವ ಸಂಪ್ರದಾಯದವನ್ನು ಸರಳವಾಗಿ ಅರ್ಥವಾಗುವಂತೆ ಮಾಡಿ ಕೊಟ್ಟರು. ಅವರ ಸರಳ ಸ್ತೋತ್ರಗಳ ರೂಪದಲ್ಲಿ ಅತ್ಯಾಧುನಿಕ ಪರಿಕಲ್ಪನೆಗಳು ವಿವರಿಸಲು ಸಾಧ್ಯವಾಯಿತು. ಉತ್ಸವ ಪ್ರಿಯನಾದ ಶ್ರೀ ಕೃಷ್ಣನ ಉತ್ಸವಗಳಿಗಾಗಿ ಭವ್ಯವಾದ ಕಾಷ್ಠರಥ ಮಾಡಿದ್ದು ವಾದಿರಾಜರ ಕಾಲದಲ್ಲಿಯೇ.

ಶ್ರೀವಾದಿರಾಜತೀರ್ಥ ಸಾಧನೆಗಳಲ್ಲಿ ಮತ್ತೊಂದೆನೆಂದರೆ ಅವರು 120 ವರ್ಷಗಳ ಜೀವಾವಧಿಯಲ್ಲಿ 5 ಸಲ ಶ್ರೀ ಕೃಷ್ಣನ ಪರ್ಯಾಯ ಕಾಲ ನಿರ್ವಹಿಸಿರುವ ಮೊದಲ ಸನ್ಯಾಸಿ ಮತ್ತು ಸುಮಾರು 3 ವರ್ಷಗಳ ಕಾಲ ಪೂಜೆ ನಂತರ ಜೀವಂತವಾಗಿ ವೃಂದಾವನ ಪ್ರವೇಶಿಸಿದರು. ವಾದಿರಾಜತೀರ್ಥರ ಬೃಂದಾವನ ಕರ್ನಾಟಕದ ಶಿರಸಿ ಸಮೀಪದ ಸೋದೆಯಲ್ಲಿದೆ.

**ಉಡುಪಿ ಕೃಷ್ಣ ಮಠದ ಪರ್ಯಾಯ:**

ಪ್ರತಿ ಎರಡು ವರ್ಷಕ್ಕೊಮ್ಮೆ ಆಗುವ ಈ ಸಾಂಸ್ಕೃತಿಕ ಕಾರ್ಯಕ್ರಮ ಬಹಳ ವಿಶೇಷದಿಂದ ಮತ್ತು ವೈವಿಧ್ಯಮಯವಾಗಿ ಆಚರಿಸುತ್ತಾರೆ. ಪರ್ಯಾಯದ ಮುಖ್ಯ ಉದ್ದೇಶ ತನ್ನ ನಂತರ ಬರುವ ಯತಿಗಳಿಗೆ ಎರಡು ವರ್ಷ ಕಾಲ ಶ್ರೀ ಕೃಷ್ಣ ಮಠದ ಆಡಳಿತವನ್ನು ಹಸ್ತಾಂತರಿಸುವ ಕಾರ್ಯಕ್ರಮ. ಪರ್ಯಾಯದ ತಯಾರಿಯು ಒಂದು ವರ್ಷದ ಮೊದಲೇ ಆರಂಭವಾಗುವುದು. ಆರೋಹಣ ಸ್ವಾಮೀಜಿ ದಂಡತೀರ್ಥ ಎಂಬ ಸ್ಥಳಕ್ಕೆ ಹೋಗಿ ಪವಿತ್ರ ಕೊಳದಲ್ಲಿ ಮಿಂದು ಪೂಜೆ ಮಾಡಿ, 3 ಗಂಟೆ ಸಮಯಕ್ಕೆ ಉಡುಪಿ ನಗರ ಪ್ರವೇಶಿಸಿ, ಅವರನ್ನು ಮತ್ತು ಇತರ ಯತಿಗಳನ್ನು ಪಲ್ಲಕಿಯಲ್ಲಿ ಕುಳ್ಳಿರಿಸಿ ಸಾಂಸ್ಕೃತಿಕ ಪ್ರದರ್ಶನಗಳೊಂದಿಗೆ ಉಡುಪಿ ಪಟ್ಟಣದ ಜೋಡುಕಟ್ಟೆ ಇಂದ ಶ್ರೀ ಕೃಷ್ಣ ಮಠದವರೆಗೆ ಮೆರವಣಿಗೆಯಲ್ಲಿ ಕರೆತರಲಾಗುತ್ತದೆ. ನಂತರ ಶ್ರೀ ಕೃಷ್ಣ ಮಠವನ್ನು ಹೊರಹೋಗುವ ಮತ್ತು ಆರೋಹಣ ಸ್ವಾಮೀಜಿಯವರು ಜೊತೆಗೂಡಿ ಪ್ರವೇಶಿಸಿ, ಅಕ್ಷಯ ಪಾತ್ರೆಯನ್ನು ಮತ್ತು ದೇವಾಲಯ ಕೀಲಿಗಳನ್ನು, ಪದ್ಧತಿಯ ಲೇಖನಗಳನ್ನು ಅವರೋಹಣ ಸ್ವಾಮೀಜಿಗಳು ಆರೋಹಣ ಸ್ವಾಮೀಜಿಯವರ ಕೈಯಲ್ಲಿ ಔಪಚಾರಿಕವಾಗಿ ಕೊಡುತ್ತಾರೆ.

ಸರ್ವಜ್ಞ ಪೀಠ ಸಿಂಹಾಸನದ ಆರೋಹಣದ ಒಂದು ವರ್ಷ ಮೊದಲು, ಆರೋಹಣ ಸ್ವಾಮೀಜಿ ಮುಖ್ಯ ಆಚರಣೆಗಳನ್ನು ಪ್ರಾರಂಭಿಸುತ್ತಾರೆ. ಅವುಗಳಲ್ಲಿ ಬಾಳೆ ಮುಹೂರ್ತ, ಅಕ್ಕಿ ಮುಹೂರ್ತ, ಕಟ್ಟಿಗೆ (ಸೌದೆ) ಮುಹೂರ್ತ ಮತ್ತು ಬತ್ತದ ಮುಹೂರ್ತ ಇವೆ.

ಬಾಳೆ ಮುಹೂರ್ತ: ಆರೋಹಣ ಸ್ವಾಮಿಜಿ ಬಾಳೆ ಮುಹೂರ್ತದಲ್ಲಿ, ಬಾಳೆ ಸಸಿಗಳನ್ನು ಕೃಷ್ಣ ಪೂಜೆ ಅಗತ್ಯಗಳಿಗೆ ಮತ್ತು ಭಕ್ತರಿಗೆ ಉಣಿಸಲು ತುಳಸಿ ಗಿಡದ ಜೊತೆಗೆ ನೆಡಲಾಗುತ್ತದೆ. ಅಕ್ಕಿ ಮುಹೂರ್ತ: ಸುಮಾರು 48 ಅಕ್ಕಿ ಮುಡಿಯನ್ನು ಸಂಗ್ರಹಿಸಲಾಗುತ್ತದೆ,



ಕಟ್ಟಿಗೆ ಮುಹೂರ್ತ: ಉರುವಲನ್ನು ಭವಿಷ್ಯದ ಬಳಕೆಗಾಗಿ ರಥ ರೂಪದಲ್ಲಿ ಸಂಗ್ರಹಿಸಲಾಗುತ್ತದೆ. ಸಂಗ್ರಹವಾಗಿರುವ ಉರುವಲು ಕೃಷ್ಣ ಮಠಕ್ಕೆ ಬರುವ ಭಕ್ತರ ಪ್ರಸಾದಾಹಾರ ಅಡುಗೆಗೆ ಬಳಸಲಾಗುತ್ತದೆ. ಬತ್ತದ ಮುಹೂರ್ತ: ಬತ್ತ ಶ್ರೀ ಕೃಷ್ಣ ಮಠದ ಆವರಣದೊಳಗೇ ಭವಿಷ್ಯದ ಅಗತ್ಯಗಳನ್ನು ಪೂರೈಸಲು ಸಂಗ್ರಹಿಸಲಾಗುತ್ತದೆ. ಪ್ರಸ್ತುತ ಸೋದೆ ಸ್ವಾಮಿಗಳು ಕಳೆದ ವರ್ಷ 18-01-2012 ದಿಂದ ಪರ್ಯಾಯ ನಡೆಸುತ್ತಿರುವರು. ಬರುವ ವರ್ಷ 2014 ಮೊದಲ ತಿಂಗಳಲ್ಲಿ ಕಾಣಿಯೂರು ಮಠದ ಶ್ರೀ ವಿದ್ಯಾವಲ್ಲಭ ಸ್ವಾಮಿಯವರು ಸರ್ವಜ್ಞ ಪೀಠ ಏರಲಿದ್ದರೆ.

**ಶ್ರೀ ಕೃಷ್ಣ ಮಠದ ಹಬ್ಬಗಳು ಮತ್ತು ಶ್ರೀ ಕೃಷ್ಣ ಜನ್ಮಾಷ್ಟಮಿ:**

ಶ್ರೀ ಕೃಷ್ಣ ಮಠದಲ್ಲಿ ಮಕರ ಸಂಕ್ರಾಂತಿ, ರಥಸಪ್ತಮಿ, ಮಧ್ವ ನವಮಿ, ಹನುಮ ಜಯಂತಿ, ಶ್ರೀ ಕೃಷ್ಣ ಜನ್ಮಾಷ್ಟಮಿ, ನವರಾತ್ರ ಮಹೋತ್ಸವ, ಮಧ್ವ ಜಯಂತಿ (ವಿಜಯ ದಶಮಿ), ನರಕ ಚತುರ್ದಶಿ, ದೀಪಾವಳಿ, ಗೀತಾ ಜಯಂತಿ ಮುಂತಾದ ಹಬ್ಬಗಳನ್ನು ಅತ್ಯಂತ ವೈಭವದಿಂದ ಆಚರಿಸಲಾಗುತ್ತದೆ.

ಅದರಲ್ಲೂ ಪ್ರತಿ ವರ್ಷ ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಪರ್ಯಾಯ ಸ್ವಾಮಿಗಳು ಮಠದಲ್ಲಿ ವಿಜೃಂಭಣೆ, ವೈಭವ, ಹಿರಿಮೆ ಮತ್ತು ತುಂಬಾ ಉತ್ಸಾಹದಿಂದ ಆಚರಿಸುತ್ತಾರೆ. ಶ್ರೀ ಕೃಷ್ಣ ಮಠದಲ್ಲಿ ಜನ್ಮಾಷ್ಟಮಿಯು ಸಿಂಹ ಮಾಸದ, ಕೃಷ್ಣ ಪಕ್ಷದ ರೋಹಿಣಿ ನಕ್ಷತ್ರ, ಅಷ್ಟಮಿಯಂದು ಆಚರಿಸುವರು.



ಹಾಗಾಗಿ ಕೆಲವು ಸಲ ಉಡುಪಿ ದೇವಾಲಯದಲ್ಲಿ ಜನ್ಮಷ್ಟಮಿಯು ಬೇರೆ ದಿನ ಆಚರಿಸಲಾಗುವುದು. ಉಡುಪಿಯ ರಥ ಬೀದಿಯು ಒಂದು ವಾರದ ಹಿಂದೆಯೇ ಅಷ್ಟಮಿಗೆ ಸಜ್ಜಾಗಲು ಶುರುವಾಗುತ್ತದೆ. ಶ್ರೀ ಕೃಷ್ಣನಿಗೆ ಮತ್ತು ಭಕ್ತರಿಗೆ ಕೊಡಲು ಸಪ್ತಮಿಯಂದೆ ಬಗೆ ಬಗೆಯ ನೈವೇದ್ಯ ತಯಾರಿ ಆರಂಭಿಸುವುದು, ಜನ್ಮಾಷ್ಟಮಿಯನ್ನು ಪರಿಪಾಲನೆ ಮಾಡುವವರು ಸಪ್ತಮಿಂದ ಅಷ್ಟಮಿಯ ಬೆಳಗ್ಗೆ ಪೂಜೆಯವರೆಗೂ ಶುದ್ಧ ಉಪವಾಸದಲ್ಲಿದ್ದು, ಭಜನೆ, ಸ್ತೋತ್ರ, ವೇದ ಮಂತ್ರ ಪಠನ ಮಾಡುತ್ತಾ ರಾತ್ರಿ ಚಂದ್ರೋದಯದ ಹೊತ್ತಿಗೆ ಕೃಷ್ಣಾರ್ಘ್ಯ ಕೊಟ್ಟು ಬೆಳಗ್ಗೆ ಪೂಜೆ ಮಾಡಿ ಪ್ರಸಾದ ಸೇವಿಸುವರು. ಪೂಜೆಯ ನಂತರ ಭಕ್ತರಿಗೆ ವಿವಿಧ ಭಕ್ಷ್ಯವನ್ನು ಪ್ರಸಾದವಾಗಿ ನೀಡಲಾಗುವುದು. ಕೃಷ್ಣಾಷ್ಟಮಿಯ ಸಂಜೆ ಮಕ್ಕಳಿಗೆ ಸ್ಪರ್ಧೆ, ರಥ ಬೀದಿಯಲ್ಲಿ ವಿವಿಧ ತಂಡದವರಿಂದ ಹುಲಿ ವೇಷ ಮತ್ತು ಅದ್ದೂರಿಯ ವಿಠ್ಠಲ ಪಿಂಡಿ ಆಚರಣೆಯಲ್ಲಿ ಸಂಭ್ರಮದ ದಿನ ಮುಗಿಯುವುದು.ಇಷ್ಟು ಸುಂದರವಾದ, ಸಂಭ್ರಮದ ಮತ್ತು ವಿಶೇಷ ದೇವಸ್ಥಳವನ್ನು ದಿನ ನಿತ್ಯವೂ ನೋಡಲಾರ್ಹ.

## ಮಹನೀಯರ ಮಾತುಗಳು

"ಪರೋಪಕಾರಾಯ ಪುಣ್ಯಾಯ,

ಪಾಪಾಯ ಪರಪೀಡನಂ"

ಅರ್ಥ : ಪರೋಪಕಾರ ಮಾಡುವದರಿಂದ ಪುಣ್ಯ ಸಂಪಾದಿಸಬಹುದು ,ಆದರೆ ಇತರರಿಗೆ ತೊಂದರೆ ಕೊಡುವುದರಿಂದ ಪಾಪಸಂಚಯವೇ ಆಗುತ್ತದೆ.

ಸಂದರ್ಭ: ವೇದಗಳನ್ನ ವರ್ಗೀಕರಿಸಿದ್ದಾರೆಂದು ಖ್ಯಾತನಾಮರಾದ ಮಹರ್ಷಿ ವೇದವ್ಯಾಸರೇ ಹದಿನೆಂಟು ಪುರಾಣಗಳ ರಚನೆಯನ್ನೂ ಮಾಡಿರುತ್ತಾರೆ. ಇತರೆ ಋಷಿಗಳು ಸೇರಿ , ಅವರಬಳಿ ಸಾರಿ , ಎಲ್ಲ ಪುರಾಣಗಳ ಸಾರವನ್ನ ಸಂಕ್ಷಿಪ್ತವಾಗಿ ತಿಳಿಯಹೇಳಬೇಕೆಂದು ಬೇಡಿಕೊಂಡಾಗ ಅವರು ಮಾನವಕುಲದ ಉದ್ಧಾರಕೆಂದೇ ಹೇಳಿದ ಮಹಾವಾಕ್ಯ ಇದು.

ಸಾಧನೆ :ವ್ಯಾಸರ ಈ ಸಂದೇಶವನ್ನ ನೆನಪಿನಲ್ಲಿ ಇಟ್ಟುಕೊಂಡು, ಎಲ್ಲ ಜೀವಜಂತುಗಳಲ್ಲಿಯೂ ದೇವರ ಅಸ್ತಿತ್ವವನ್ನು ಗುರುತಿಸಿ, ಯಾರಿಗೂ ನೋವುಂಟು ಮಾಡದೆ, ದಯಾಭಾವ ಇರಿಸಿ ಕೊಂಡು ಜೀವನ ಸಾಗಿಸುವುದು.

HELP EVER , HURT NEVER.

**ಚೆನ್ನಕೇಶವ ಮೂರ್ತಿ**

"ಎಂದರೋ ಮಹಾನುಭಾವುಲು, ಅಂದರಿಕಿ ವಂದನಮುಲು " ಎಂಬ ಅಮೋಘವಾದ ಕೃತಿಯನ್ನು ಶ್ರೀ ತ್ಯಾಗರಾಜರು ಬಹುಷಃ ಅವರ ಸಮಕಾಲೀನರಾದಂಥಹ ಶ್ರೀ ಮುತ್ತುಸ್ವಾಮಿ ದೀಕ್ಷಿತರು ಹಾಗೂ ಶ್ರೀ ಶ್ಯಾಮಾಶಾಸ್ತ್ರಿಯವರನ್ನು ಮನಸ್ಸಿನಲ್ಲಿಟ್ಟುಕೊಂಡೇ ರಚಿಸಿರಬಹುದೇನೋ!! ಇಂಥಹ ಅನರ್ಘ್ಯ ರತ್ನಗಳ ಒಂದು ಕಿರು ಪರಿಚಯ.



ಶ್ರೀ ಮುತ್ತುಸ್ವಾಮಿ ದೀಕ್ಷಿತರು:
(1775 – 1834)

ಶ್ರೀ ಮುತ್ತುಸ್ವಾಮಿ ದೀಕ್ಷಿತರು ಜನಿಸಿದುದು ತಿರುವಾಯೂರಿನಲ್ಲಿ. ತಂದೆ ರಾಮಸ್ವಾಮಿ ದೀಕ್ಷಿತರು ಮಹಾ ಮೇಧಾವಿ ಸಂಗೀತ ವಿಧ್ವಾಂಸರು. ವೈದೀಶ್ವರದ ಪ್ರಮುಖ ದೇವರಾದ ಮುತ್ತುಕುಮಾರಸ್ವಾಮಿಯ ಅನುಗ್ರಹದಿಂದ ಜನಿಸಿದ ಸಲುವಾಗಿ ಈ ಹೆಸರು. ಇವರು 16ನೆಯ ವಯಸ್ಸಿನಲ್ಲೇ ವೇದಾಧ್ಯಯನ , ಕಾವ್ಯಾಲಂಕಾರ, ಜ್ಯೋತಿಷ್ಯ ಶಾಸ್ತ್ರ , ವೈದ್ಯ ಮತ್ತು ಮಂತ್ರ ಶಾಸ್ತ್ರಗಳಲ್ಲಿ ಪಾಂಡಿತ್ಯವನ್ನು ಪಡೆದಿದ್ದರು.

ದೀಕ್ಷಿತರು ಸಣ್ಣವರಿದ್ದಾಗ ಕುಟುಂಬ ಸಮೇತರಾಗಿ ಮನಾಲಿಯಲ್ಲಿ ಹಲವು ಕಾಲ ತಂಗಿದ್ದು, ನಂತರ 5 ವರುಷಗಳ ಕಾಲ ವಾರಣಾಸಿಯಲ್ಲಿ ನೆಲೆಸಿದ್ದಾಗ ಹಿಂದುಸ್ತಾನಿ ಸಂಗೀತವನ್ನು ಅಭ್ಯಾಸ ಮಾಡಿದರು . ಹಾಗಾಗಿ ಇವರ ಅನೇಕ ಕೃತಿಗಳಲ್ಲಿ ಹಿಂದುಸ್ತಾನಿ ಶೈಲಿಯನ್ನು ಕಾಣಬಹುದು. ಅವರ ಗುರುಗಳಾದ ಶ್ರೀ ಚಿದಂಬರನಾಥ ಯೋಗಿಗಳ ಅಣತಿಯಂತೆ ಕಾಶಿಯಲ್ಲಿ ಗಂಗಾಸ್ನಾನ ಮಾಡಿ ಪ್ರಾರ್ಥಿಸಿದಾಗ ಇವರ ಬೊಗಸೆಯ ನೀರಿನಲ್ಲಿ ವೀಣೆಯ ದರ್ಶನವಾಯಿತು!! ಅಂದಿನಿಂದ ವೀಣಾವಾದನದ ಸಾಧನೆ ಪ್ರಾರಂಭವಾಗಿ ನಿಷ್ಣಾತ ವೈಣಿಕರಾದ ದೀಕ್ಷಿತರು ಪಂಚದಶ ಗಮಕಗಳ ಪ್ರಯೋಗ ಮಾಡಿ ತೋರಿಸಿದ್ದರು.

ಗುರುಗಳ ನಿಧನದನಂತರ ದಕ್ಷಿಣ ಭಾರತಕ್ಕೆ ಹಿಂತಿರುಗಿ ತಿರುತ್ಥನಿಯ ಸುಬ್ರಮ್ಹಣ್ಯೇಶ್ವರನ ಪರಮ ಭಕ್ತರಾದರು.

ಒಮ್ಮೆ ಸುಬ್ರಮ್ಹಣ್ಯಸ್ವಾಮಿಯು ದರ್ಶನವಿತ್ತು ಬಾಯಿ ತೆರೆಯಲು ಹೇಳಿ ಕಲ್ಲುಸಕ್ಕರೆಯ ಚೂರೊಂದನ್ನಿಟ್ಟು ಅದೃಷ್ಯರಾದರು. ಆ ಕ್ಷಣ ಹೊರಹೊಮ್ಮಿದ ಮೊಟ್ಟಮೊದಲ ಕೃತಿ, ಮಾಯಾಮಾಳವಗೌಳ ರಾಗದ "ಶ್ರೀನಾಥಾದಿ ಗುರುಗುಹೋ ಜಯತಿ ಜಯತಿ". ತದನಂತರ ಹಲವಾರು ತೀರ್ಥಕ್ಷೇತ್ರಗಳ ಯಾತ್ರೆಯನ್ನು ಕೈಗೊಂಡು ಆಯಾ ಕ್ಷೇತ್ರಗಳ ವೈಶಿಷ್ಟ್ಯವನ್ನು ವರ್ಣಿಸುತ್ತ 'ಗುರುಗುಹ' ಎಂಬ ಅಂಕಿತದಲ್ಲಿ ಮಧುರವಾದ ಕೃತಿಗಳನ್ನು ರಚಿಸಿದರು. ರಚನೆಯ ರಾಗದ ಹೆಸರನ್ನು ಅರ್ಥಪೂರ್ಣವಾಗಿ ಹೊಂದಿಸಿರುವುದೇ ಇವರ ಕೃತಿಗಳ ವೈಶಿಷ್ಟ್ಯ. ದೀಕ್ಷಿತರ ಮತ್ತೊಂದು ಅಪಾರ ಕೊಡುಗೆಯೆಂದರೆ, ನವಗ್ರಹ ಕೃತಿಗಳು. ಗ್ರಹಗಳ ಪರಿಚಯ, ಸ್ಥಾನ ವಿವರಿಸಿ , ಮೊಕ್ಷಸಾಧನೆಗೆ ಕರ್ಮ, ಭಕ್ತಿ ಮತ್ತು ಜ್ಞಾನಮಾರ್ಗಗಳನ್ನು ಅನುಸರಿಸಬೇಕೆಂದು ತೋರಿಸಿದ್ದಾರೆ . ಒಂದು ಸಂದರ್ಭದಲ್ಲಿ ಶಿಷ್ಯನೊಬ್ಬನ ಹೊಟ್ಟೆ ಶೂಲೆಯನ್ನು ಪರಿಹರಿಸುವ ಸಲುವಾಗಿ ಗುರು ಮತ್ತು ಶನಿ ಗ್ರಹಗಳನ್ನು ಕುರಿತು ಕೃತಿಗಳನ್ನು ರಚಿಸಿ , ಶಿಷ್ಯನಿಗೆ ತಾವೇ ಸ್ವತಃ ಕಲಿಸಿಕೊಟ್ಟು, ನೋವನ್ನು ನಿವಾರಿಸಿದರೆಂಬ ಪ್ರತೀತಿಯಿದೆ.

ದೀಕ್ಷಿತರು ತಮ್ಮ ನವಾವರ್ಣ ಕೃತಿಗಳಲ್ಲಿ ಅವರ ಆರಾಧ್ಯದೇವತೆಯಾದಂಥಹ ಲಲಿತಾಂಬಿಕೆಯ ಸೌಂದರ್ಯವನ್ನು ಅತಿ ಮನೋಹರವಾಗಿ ವರ್ಣಿಸಿದ್ದಾರೆ. ಇವರು ರಚಿಸಿರುವಂಥಹ ವಾತಾಪಿ ಗಣಪತಿಂ,ಶ್ರೀಕಾಂತಿಮತಿಂ, ಅಖಿಲಾಂಡೇಶ್ವರಿ ರಂಗನಾಯಕಂ, ಸೌಂದರರಾಜಂ ಆಶ್ರಯೇ, ಮಾನಸ ಗುರುಗುಹ, ಹಲವಾರು ಕೃತಿಗಳನ್ನು ನಾವು ಕೇಳುತ್ತಿದ್ದೇವೆ. ಇಂಥಹ ಮಹಾವ್ಯಕ್ತಿಯು ನರಕ ಚತುರ್ದಶಿಯಂದು ಜಗನ್ಮಾತೆಗೆ ವಿಶೇಷ ಪೂಜೆ ಸಲ್ಲಿಸಿ, ಸಂಜೆ ತಮ್ಮ ಶಿಷ್ಯರನ್ನುಕರೆದು, ತಾವೇ ರಚಿಸಿದ ಪೂರ್ವಿಕಲ್ಯಾಣಿ ರಾಗದ "ಮೀನಾಕ್ಷಿ ಮೇಮುದಂ" ಕೃತಿಯನ್ನು ವೀಣೆಯಲ್ಲಿ ನುಡಿಸುತ್ತಾ, ಆ ಜಗನ್ಮಾತೆಯ ಮಡಿಲಿನಲ್ಲಿ ಲೀನವಾದರು.



ಶ್ಯಾಮಾ ಶಾಸ್ತ್ರಿಗಳು
(ಏಪ್ರಿಲ್ 26, 1762 – 1827)

ಕರ್ನಾಟಕ ಶಾಸ್ತ್ರೀಯ ಸಂಗೀತದ ತ್ರಿಮೂರ್ತಿಗಳಲ್ಲಿ ಹಿರಿಯರಾದವರು ಶ್ರೀಶ್ಯಾಮಾ ಶಾಸ್ತ್ರಿಗಳು . ತಮಿಳುನಾಡಿನ ತಿರುವಾಯೂರಿನಲ್ಲಿ ಜನಿಸಿದ ಶ್ಯಾಮಾ ಶಾಸ್ತ್ರಿಯವರ ಮೂಲ ಹೆಸರು ವೆಂಕಟಕೃಷ್ಣ. ಇವರು ಹುಟ್ಟಿದ್ದು ಏಪ್ರಿಲ್ 26, 1762 . ಇವರ ಪೂರ್ವಜರು ಅರ್ಚಕ ವೃತ್ತಿಯವರಾಗಿದ್ದು, ಸಂಗೀತ ಶಾಸ್ತ್ರ ಪದ್ಧತಿಯಿಂದ ದೂರ ಉಳಿದಿದ್ದರು. ಇವರ ಮನೆಮಾತು ತೆಲುಗು. ವೆಂಕಟಕೃಷ್ಣ ತನ್ನ ಸಣ್ಣ ವಯಸ್ಸಿನಲ್ಲೇ ತೆಲುಗು ಹಾಗು ಸಂಸ್ಕೃತದಲ್ಲಿ ಪಾಂಡಿತ್ಯ ಪಡಿದಿದ್ದು, ಜೊತೆಯಲ್ಲಿ ಸ್ವಲ್ಪ ಮಟ್ಟಿಗೆ ಸಂಗೀತದ ಬಾಲಪಾಠಗಳು ನಡೆದಿದ್ದವು.

ವೆಂಕಟಕೃಷ್ಣನು ಸುಮಾರು ಹದಿನೆಂಟು ವರ್ಷದವನಿದ್ದಾಗ, ಅವರ ಕುಟುಂಬವು ತಂಜಾವೂರಿಗೆ ತೆರಳಿತು. ಅವರ ಅದೃಷ್ಟವೋ ಎಂಬಂತೆ, ಒಬ್ಬ ನೃತ್ಯ ಹಾಗು ಸಂಗೀತ ಶಾಸ್ತ್ರದ ಗುರುವಾದ ಸಂಗೀತಸ್ವಾಮಿಯವರು, ಇವರ ಅತಿಥಿಯಾಗಿ 3 – 4 ತಿಂಗಳಕಾಲ ಇವರೊಟ್ಟಿಗೆ ತಂಗಿದ್ದರು. ವೆಂಕಟಕೃಷ್ಣನ ಸುಮಧುರ ಕಂಠದ ಜೊತೆ, ಅವನ ಸಂಗೀತದಲ್ಲಿನ ಆಸಕ್ತಿ ಹಾಗು ನೈಪುಣ್ಯತೆಗೆ ಬೆರಗುಗೊಂಡರು.

ವೆಂಕಟಕೃಷ್ಣನ ತಂದೆಯವರ ಒಪ್ಪಿಗೆ ಪಡೆದು, ಅವನಿಗೆ ಸಂಗೀತದ ವಿವಿಧ ಅಂಶಗಳನ್ನು ಕಲಿಸಿದರಲ್ಲದೆ ರಾಗ, ಸ್ವರ ಪ್ರಸ್ತಾರ ಗಳನ್ನ ಹೇಳಿಕೊಟ್ಟರು. ಅ ಬಾಲಕನು, ಕೇವಲ ನಾಲ್ಕು ತಿಂಗಳಲ್ಲಿ ಸಂಗೀತದ ತೀಕ್ಷ್ಣ ಹಾಗು ಸೂಕ್ಷ್ಮವಾದ ಭಾಗಗಳನ್ನ ಆತೀ ಶೀಘ್ರದಲ್ಲಿ ಗುರುವಿನ ಮುಖೇನ ಅರಿತುಕೊಂಡನು.

ಆಗಿನ ತಂಜಾವೂರಿನ ಆಸ್ಥಾನ ವಿದ್ವಾಂಸರಾದ ಆದಿಅಪ್ಪಯ್ಯ ಅವರು, ಪ್ರಸಿಧ್ಧವಾದ ಭೈರವಿ –ಅಟ್ಟತಾಳ (ವೀರಿಬೋಣಿ) ವರ್ಣದ ವಾಗ್ಗೇಯಕಾರರು. ಶ್ಯಾಮಾ ಶಾಸ್ತ್ರಿಯವರು,ಅಪ್ಪಯ್ಯ ಅವರ ಪ್ರಭಾವದಿಂದಾಗಿ ಭೈರವಿ ಸ್ವರಜಾತಿ (ಕಾಮಾಕ್ಷಿ) ಯನ್ನು ರಚಿಸಿದ್ದಾರೆ.

ಬಂಗಾರು ಕಾಮಾಕ್ಷಿ ದೇವಸ್ಥಾನದ ಅರ್ಚಕರಾಗಿದ್ದ ಇವರು, ಆ ತಾಯಿಯ ಪರಮ ಭಕ್ತರಾದರು. ಕೆಲವೊಮ್ಮೆ ಆ ದೇವಿಯನ್ನು ಅತೀವ ಕೊಂಡಾಡುತ್ತ ಮೂರ್ಛೆ ಹೋದ ಅನೇಕ ಸಂಧರ್ಭಗಳನ್ನ ಸ್ಮರಿಸಬಹುದು. ಅವರ ಭಕ್ತಿ ಅತೀತವಾದಾಗ ತಮ್ಮ ಕೃತಿಗಳನ್ನ ಹೊರಗೆಡಹುತ್ತಿದ್ದರು. ಇವರ ಕೃತಿಗಳು "ಶ್ಯಾಮ ಕೃಷ್ಣ" ಎಂಬ ಅಂಕಿತದಿಂದ ಹೊಂದಿರುವುದು. ಇವು ಹೆಚ್ಚಾಗಿ ತೆಲುಗು, ಮತ್ತು ಸ್ವಲ್ಪ ಮಟ್ಟಿಗೆ ಸಂಸ್ಕೃತ ಮತ್ತು ತಮಿಳು ಭಾಷೆಗಳಲ್ಲಿವೆ. ಶ್ರೀ ತ್ಯಾಗರಾಜರು ಹಾಗು ಶ್ರೀಶ್ಯಾಮಾ ಶಾಸ್ತ್ರಿಗಳು , ತಾವುಗಳು ರಚಿಸಿದ ಕೃತಿಗಳ ಬಗ್ಗೆ ಬಹಳ ಸಮಯದವರೆಗೂ ಚರ್ಚೆ ನಡೆಸುತ್ತಿದ್ದರು ಎಂದು ತಿಳಿದುಬಂದಿದೆ.

ಇವರು ತ್ರಿಮೂರ್ತಿಗಳಲ್ಲಿ, ಇನ್ನಿಬ್ಬರಿಗಿಂತ ಕಡಿಮೆ ಕೃತಿಗಳನ್ನು ರಚಿಸಿದರಾದರು, ಅವುಗಳು ಅಷ್ಟೇ ಪ್ರಸಿದ್ಧಿಯನ್ನು ಹೊಂದಿವೆ. ಇವರು ಸುಮಾರು ಮುನ್ನೂರು ಕೃತಿಗಳನ್ನು ರಚಿಸಿದ್ದಾರೆ. ಇವರು ರಚಿಸಿದ ಕೃತಿಗಳು ಸಾಮಾನ್ಯ ಜನರಿಗೆ ಸರಳವಾಗಿ ತಲುಪುತ್ತಿರಲಿಲ್ಲ. ಅಷ್ಟೇ ಅಲ್ಲ, ಇವರ ಕೃತಿಗಳನ್ನ ಆಸ್ವಾದಿಸಲು ಸ್ವಲ್ಪಮಟ್ಟಿಗಾದರೂ ಸಂಗೀತವನ್ನು ತಿಳಿದಿರಬೇಕಿತ್ತು. ಇವರ ಕೃತಿಗಳನ್ನು ಕಬ್ಬಿಣದ ಕಡಲೆಗೆ ಹೋಲಿಸಲಾಗಿದೆ. ಅಲಸೂರು ಕೃಷ್ಣಯ್ಯರ್, ಸುಬ್ಬರಾಯ ಶಾಸ್ತ್ರಿ, ಬಾರಂಗಬಡಿ ಪಂಚನಾತಯ್ಯರ್ ಇವರುಗಳು ಶ್ರೀಶ್ಯಾಮ ಶಾಸ್ತ್ರಿ ಗಳ ಶಿಷ್ಯ ವೃಂದಕ್ಕೆ ಸೇರಿದವರು.

ಕೃತಿಗಳ ಜೊತೆ ಇವರು ವರ್ಣಗಳನ್ನು ಹಾಗು ಸ್ವರಜತಿಗಳನ್ನೂ ಸಂಯೋಜಿಸಿದರು. ಇವರು ಸಂಗೀತ ಶಾಸ್ತ್ರದ ಸ್ವರಜತಿಯ ಶಿಲ್ಪಿ ಎಂದೇ ಹೇಳ ಬಹುದು. ಈ ಹಿಂದೆ ನೃತ್ಯಕ್ಕೆಂದೇ ಮೀಸಲಿದ್ದ ಸ್ವರಜತಿಯನ್ನು, ಸಂಗೀತದ ಒಂದು ಸುಂದರ ಭಾಗವನ್ನಾಗಿಸಿದರು. ಸ್ವರಾಕ್ಷರ ಮತ್ತು ಸ್ವರ ಸಾಹಿತ್ಯಗಳು ಇವರ ಸ್ವಂತಿಕೆಯ ಪ್ರತೀಕ. ಇವರ ಪ್ರಸಿದ್ಧವಾದ ಮೂರು (ಭೈರವಿ, ಯದುಕುಲಕಾಂಭೋಜಿ ಹಾಗು ತೋಡಿ) ಸ್ವರಜಾತಿಗಳು ರತ್ನತ್ರಯವೆಂದು ಕರೆಯಲ್ಪಡುತ್ತವೆ.

ಇವರ ಕೃತಿಗಳು ಸಾಮಾನ್ಯವಾಗಿ

## ಕರ್ನಾಟಕ ಸಂಗೀತದಲ್ಲಿ ಪ್ರಖ್ಯಾತರಾದ ಮಹಾನ್ ಸಂಗೀತಗಾರರು

ಸಂಗ್ರಹಣೆ-ವಸಂತ ಅಶೋಕ್ ಮತ್ತು ಮಾಧವಿ ಕುಲಕರ್ಣಿ

ಬಳಕೆಯಲ್ಲಿರುವ ಸಾವೇರಿ ಹಾಗು ಆನಂದಭೈರವಿ ರಾಗಗಳಲ್ಲಿ ಕಾಣಬಹುದು. ಕೆಲವು ಕೃತಿಗಳು ಮಂಜಿ, ಕರ್ನಾಟಕಕಾಪಿ, ಚಿಂತಾಮಣಿ ರಾಗಗಳಲ್ಲಿವೆ. ಆಗಿನ ಜಾನಪದ ಹಾಡುಗಳು ಸಾಮಾನ್ಯವಾಗಿ ಆನಂದಭೈರವಿ ರಾಗದಲ್ಲಿರುತ್ತಿತ್ತು. ಇವರ ಕೃತಿಗಳಾದ ಮರಿವೇರೆಗತಿ, ಹಿಮಾಚಲ ತನಯೇ, ಓ ಜಗದಂಬ, ಪಾಹಿಶ್ರಿಗಿರಿರಾಜ ಮತ್ತು ಕೆಲವು ವರ್ಣಗಳಲ್ಲಿ, ಈ ರಾಗಕ್ಕೆ ಹೊಸ ರೂಪವನ್ನೇ ಕಾಣಬಹುದು.

ಶ್ಯಾಮ ಶಾಸ್ತ್ರಿಯವರ ಕೃತಿಗಳು ಬಹುಶಃ ಲಯಬದ್ಧ ನುಡಿಗಟ್ಟಾದ "ತ ಧಿ ಗಿ ಣ ತೋಂ" ಗೆ ಸಂಬಂಧಿಸಿರುತ್ತವೆ. ಉದಾಹರಣೆಗೆ ಸಾರಸಮುಖಿ, ವರಮೊಸಗು, ಕಮಲಮುಖಿ ಯಂತಹ ಐದು ಅಕ್ಷರದ ಪದಗಳ ಬಳಕೆ ಕಾಣಬಹುದು. ಹೇರಳವಾಗಿ ಕಾಣಬಹುದಾದ ಮಿಶ್ರಛಾಪು ತಾಳ ಇವರ ಕೃತಿಗಳಲ್ಲಿ ಅತೀ ಹೆಚ್ಚಿನ ಬಳಕೆಯಲ್ಲಿದೆ. ಅವರು ದ್ವಿ-ಲಯದಲ್ಲಿ ಹಾಡಬಹುದಾದ ಕೃತಿಗಳನ್ನು ರಚಿಸಿದ್ದಾರೆ. ಉದಾಹರಣೆಗೆ ಶಂಕರಿ ಶಂಕುರು ಕೃತಿಯು ರೂಪಕ ಹಾಗು ಆದಿತಾಳಗಳ ಲಯಕ್ಕೆ ಹೊಂದುವ ಹಾಗಿದೆ. ಇವರ ಕೃತಿಗಳ ರಾಗ ಹಾಗು ತಾಳಗಳು ಲಯಬದ್ಧವಾದ ಚೌಕಟ್ಟಿನಲ್ಲಿರುತ್ತಿದ್ದವು.

ಒಮ್ಮೆ, ಬೋಬಿಲಿಯ ಕೇಶವಯ್ಯನವರು, ತಂಜಾವೂರು ಆಸ್ಥಾನದಲ್ಲಿ ಸಂಗೀತಗಾರರನ್ನು ಸಂಕೀರ್ಣವಾದ ತಾಳಗಳ ಮೂಲಕ ಸವಾಲು ಎಸೆಗಲು, ಅವರನ್ನು ಎದುರಿಸುವ ಮುನ್ನ, ಕಾಮಾಕ್ಷಿ ದೇವಸ್ಥಾನಕ್ಕೆ ಹೋಗಿ "ದೇವಿ ಬರೋವ ಸಮಯಮಿದೆ "("ನೀವು ನನ್ನನ್ನು ರಕ್ಷಿಸಲು ಸಮಯ"ಎಂದರ್ಥ) ಹಾಡಿ, ಆತ್ಮವಿಶ್ವಾಸದೊಂದಿಗೆ, ಆಸ್ಥಾನಕ್ಕೆ ಬಂದು. ಕೇಶವಯ್ಯನವರ ಮೇಲೆ ಜಯ ಸಾಧಿಸಿದರು.

ಒಮ್ಮೆ, ಪುದುಕೋಟ್ಟೆಯಲ್ಲಿ ಶ್ಯಾಮ ಶಾಸ್ತ್ರಿಗಳ ಹಾಡಿದ್ದುದನ್ನು ಕೇಳಿದ ಒಬ್ಬ ಸಂತರ ಸಲಹೆಯ ಮೇರೆಗೆ, ಮೀನಾಕ್ಷಿ ಅಮ್ಮನ ಹೊಗಳಿ ಹಾಡಲು ಮಧುರೈಗೆ ಹೋಗಿ " ನವರತ್ನ ಮಾಲಿಕೆ " (ಒಂಬತ್ತು ಕೃತಿಗಳು ) ಸಂಯೋಜಿಸಿದ್ದಾರೆ. ಉದಾಹರಣೆಗೆ, ಶಂಕರಾಭರಣದಲ್ಲಿ ಸರೋಜಾದಳನೇತ್ರಿ, ಅಹಿರಿಯಲ್ಲಿ ಮಾಯಮ್ಮ, ಧನ್ಯಾಸಿಯಲ್ಲಿ ಮೀನಲೋಚನ ಬ್ರೋವ, ಇತ್ಯಾದಿ

ನಾಗಪಟ್ಟಿನಾಡಲ್ಲಿ ಇವರು ಮತ್ತು ಅಪ್ಪುಕುಟ್ಟಿನತ್ತುವನರರ ಮಧ್ಯೆ ನಡೆದ "ಸಂಗೀತ ಪ್ರವೀಣ ಯಾರು?" ಎಂಬ ಸ್ಪರ್ಧೆಯಲ್ಲಿ, ಇವರು ಜಯಗಳಿಸಿದ ಪರಿಣಾಮವಾಗಿ ಅಪ್ಪುಕುಟ್ಟಿಯವರು ಎಂದೆಂದಿಗೂ ತನ್ನ ತಂಬೂರಿ ಮತ್ತು ತಾಳಗಳನ್ನು ಮುಟ್ಟುವುದಿಲ್ಲವೆಂದು ಶಪಥತೊಟ್ಟರು.

ಶ್ಯಾಮ ಶಾಸ್ತ್ರಿಯವರಿಗೆ ಇಬ್ಬರು ಮಕ್ಕಳು, ಪಂಜು ಶಾಸ್ತ್ರಿ ಮತ್ತು ಸುಬ್ಬರಾಯ ಶಾಸ್ತ್ರಿ . ಸುಬ್ಬರಾಯ ಶಾಸ್ತ್ರಿಯವರು ಬಹುಮುಖ ಸಂಗೀತಗಾರ (ಮತ್ತು ತ್ಯಾಗರಾಜ ಶಿಷ್ಯ) ರಾಗಿದ್ದರು. ಪಂಜು ಶಾಸ್ತ್ರಿಯವರ ಮೂಲಕ, ವಂಶವೃಕ್ಷ ಬೆಳೆದು ಕೆಲವು ವಿದ್ವಾಂಸರು ನಿರ್ಮಾಣಗೊಂಡರು.

ತನ್ನ ಸಮಕಾಲೀನರಂತೆ ಇವರೂ ಸಹ ತಮ್ಮ ಕೊನೆಯ ದಿನ-ಸಮಯ ವನ್ನು ತಿಳಿಸಿದ್ದರು. ತಮ್ಮ ಪತ್ನಿ ತೀರಿಕೊಂಡು ಕೇವಲ ಆರು ದಿನಗಳಲ್ಲಿ (ಫೆಬ್ರವರಿ 6, 1827) ಇವರು ಕಾಲಾತೀತರಾದರು.

## ಪ್ರಕೃತಿಯ ಉಳಿಸಿ- ಬೆಳೆಸಿ

ಮನುವಚನ್

ಪ್ರಕೃತಿ ನಮಗೆ ಏನೆಲ್ಲಾ ಕೊಡುತ್ತದೆ. ನಾವು ಏನಾದರು ಅದಕ್ಕೆ ಒಳ್ಳೆಯದು ಮಾಡಬೇಕು. ಗೆಳೆಯರೇ ನಾನು ನಿಮ್ಮ ಹತ್ತಿರ ಒಂದು ವಿಷಯ ಹಂಚಿಕೊಳ್ಳಬೇಕು. ನಾನು ನನ್ನ ಅಮ್ಮ ಮತ್ತು ಅಪ್ಪನವರ ಜೊತೆ ಅಬ್ದಲ್ಲಿಗೆ ಹೋಗಿದ್ದೆ. ಅಲ್ಲಿ ಅಂ-ದುಕೊಂಡೆ ಬೇಜಾರು ಆಗುತ್ತೆ ಎಂದು, ಆದರೆ ಆ ವಿಶೇಷ ಸ್ಥಳ ನೋಡಿದ ಮೇಲೆ ಬೇಜಾರು ಹೋಯಿತು. ಅಲ್ಲಿ ಇರುವ ಕೊಳ ತುಂಬಾ ಚೆನ್ನಾಗಿದೆ ಅದು ಜನಗಳು ಮಾಡಿರುವಂತ ಕೊಳ, ಗಿಡ, ಮರ, ಪ್ರಾಣಿ-ಪಕ್ಷಿಗಳು ಹೆಚ್ಚು ವಾಸಿಸುತ್ತವೆ. ಇದು KOCಯವರ ಜಾಗ ಇಲ್ಲಿ ಯಾರನ್ನೂ ಬಿಡುವುದಿಲ್ಲ ಇದು ಪ್ರಾಣಿ, ಪಕ್ಷಿ, ಗಿಡಮರಗಳಿಗೆಂದೇ ಬಿಟ್ಟಿದ್ದಾರೆ. K'S PATH ಇವರ ಜೊತೆ ನಾವು ಸೇರಿ ಅಲ್ಲಿ ಇದ್ದ ಕಸ ಕಡ್ಡಿ ತೆಗೆದೆವು. ಅಲ್ಲಿ ಗೂಡುಗಳು ಚಿಕ್ಕದರಿಂದ ತುಂಬಾ ದೊಡ್ಡದವರೆಗೂ ಇದ್ದವು. ಅಲ್ಲಿ ಹೆಚ್ಚು ಹಾವು, ಇಲಿ ಇದ್ದವು. ಕೊಳದ ಹತ್ತಿರ ತುಂಬಾ ಗಿಡಗಳು ಬೆಳೆದು ಹೂ ಎಲ್ಲಾ ಬಿಟ್ಟಿದ್ದವು. ಅಲ್ಲಿ ಎಷ್ಟೊಂದು ಸಿಗರೇಟು ತುಂಡುಗಳು ಬಿದ್ದಿದ್ದವು ಅವನ್ನು ತೋರಿಸಿ ಹೇಳಿದರು. ನಾಲ್ಕು ನೂರು ವರ್ಷಗಳು ಬೇಕಾಗುತ್ತದೆ ಮರಳಿನ ಜೊತೆ ಈ ಸಿಗರೇಟಿನ ತುಂಡುಗಳು ಬೆರೆಯಲು. ಈ ಮಾತು ಕೇಳಿ ಬೇಸರ ಆಯಿತು ಇದ-ರಿಂದ ಎಷ್ಟು ತೊಂದರೆಗಳು ಇವೆ ಗಿಡ ಮರ ಬೆಳೆಯಲು ಮಣ್ಣು ಚೆನ್ನಾಗಿ ಇರಬೇಕು. ಇದಕ್ಕೆ ನಾವು ಏನು ಮಾಡಬಹುದು ಎಂದು ಎನಿಸಿತು ಅಲ್ಲಿ ಇದ್ದ ಕಸ ಸ್ವಚ್ಛ ಮಾಡಿ ಆಮೇಲೆ ಅನಿಸಿತು ನಾವು ನಮ್ಮ ಸುತ್ತಮುತ್ತ ಇರುವ ಜಾಗ ಸ್ವಚ್ಛ ಮಾಡಬೇಕು. ಪರಿಸರ ಕಾಪಾಡಬೇಕು ಎಂದು. ನೋಡಿ ಗೆಳೆಯರೆ ನನಗೆ ಆ ಜಾಗಕ್ಕೆ ಹೋಗಲು ಬೇಜಾರು ಇತ್ತು ಆದರೆ ಅಲ್ಲಿ ಹೋಗಿದ್ದಕ್ಕೆ ಖುಷಿ ಕೊಟ್ಟಿತು. ಪರಿಸರಕ್ಕೆ ಏನಾದರು ಮಾಡಲು ಇಲ್ಲ ಅನ್ನಬಾರದು ಮತ್ತು ಕಸವನ್ನು ಅಲ್ಲಿ ಇಲ್ಲಿ ಹಾಕದೆ ಸ್ವಚ್ಛವಾಗಿ ನಮ್ಮ ಪರಿಸರವನ್ನು ಇಟ್ಟುಕೊಂಡಿರಬೇಕು. ಎಲ್ಲರೂ ಬನ್ನಿ ನಮ್ಮ ಪರಿಸರವನ್ನು ಉಳಿಸಿಕೊಳ್ಳೋಣ.

## ರಾಗಿ ಪುಟ್ಟು ಸಿಹಿ ಮತ್ತು ಖಾರ

ವಿನುತ ರಮೇಶ

### ರಾಗಿ ಪುಟ್ಟು ಸಿಹಿ

ಬೇಕಾಗುವ ಸಾಮಾನು

ರಾಗಿಹಿಟ್ಟು ---> 2 ಕಪ್
ನೀರು ---> 1 ಕಪ್
ತೆಂಗಿನಕಾಯಿ ---> 1 ಹೋಳು
ಬೆಲ್ಲ ---> 50 ಗ್ರಾಂ
ಏಲಕ್ಕಿ ---> 2
ಉಪ್ಪು ---> 1 ಟೀ ಚಮಚ

ವಿಧಾನ :- ಅಡುಗೆ ಉಪ್ಪನ್ನು ನೀರಿನಲ್ಲಿ ಕರಗಿಸಿ, ಆ ನೀರಿನಲ್ಲಿ ರಾಗಿಹಿಟ್ಟನ್ನು ಮೆದುವಾಗಿ ಕಲಸಿ, ತೆಂಗಿನಕಾಯಿ ತುರಿದುಹಾಕಿ; ಬೆಲ್ಲದಪುಡಿ, ಏಲಕ್ಕಿಪುಡಿ ಹಾಕಿ ಚೆನ್ನಾಗಿ ಕಲಸಿ. ಈ ಹಿಟ್ಟನ್ನು ಅರ್ಧಘಂಟೆ ಕಾಲ ಹಬೆಯಲ್ಲಿ ಬೇಯಿಸಿ. ಬಿಸಿಯಾಗಿರುವಾಗಲೇ ಬಳಸಿ. ಇದು ಬೆಳೆಯುವ ಮಕ್ಕಳಿಗೆ ಅತ್ಯುತ್ತಮ ಆಹಾರ.

### ರಾಗಿ ಪುಟ್ಟು ಖಾರ

ರಾಗಿಹಿಟ್ಟು ---> 2 ಕಪ್
ನೀರು ---> 1 ಕಪ್
ತೆಂಗಿನಕಾಯಿ ---> 1 ಹೋಳು
ಉಪ್ಪು ---> 1 ಟೀ ಚಮಚ

ಒಗ್ಗರಣೆಗೆ: ತುಪ್ಪ, ಸಾಸಿವೆ, ಕಡಲೆಬೇಳೆ, ಉದ್ದಿನಬೇಳೆ, ಒಣಮೆಣಸಿನಕಾಯಿ, ಇಂಗು, ಕರಿಬೇವು

ಮಾಡುವ ವಿಧಾನ :- ಉಪ್ಪು ಕರಗಿದ ನೀರಿನಲ್ಲಿ ರಾಗಿ ಹಿಟ್ಟನ್ನು ಉದುರು ಉದುರಾಗಿ ಕಲಸಿ. ನಂತರ ಈ ಹಿಟ್ಟಿಗೆ ಕಾಯಿತುರಿ ಬೆರೆಸಿ 20 ನಿಮಿಶ ಹಬೆಯಲ್ಲಿ ಬೇಯಿಸಿ. ಕಾದ ತುಪ್ಪದಲ್ಲಿ ಸಾಸಿವೆ, ಕಡಲೆಬೇಳೆ, ಉದ್ದಿನಬೇಳೆ, ಇಂಗು, ಒಣಮೆಣಸಿನಕಾಯಿ, ಕರಿಬೇವು ಹಾಕಿ ಒಗ್ಗರಣೆ ಮಾಡಿ ಅದಕ್ಕೆ ಹಬೆಯಲ್ಲಿ ಬೇಯಿಸಿದ ರಾಗಿಹಿಟ್ಟನ್ನು ಹಾಕಿ ಚೆನ್ನಾಗಿ ಕೈಯಾಡಿ ಕೆಳಗಿಳಿಸಿ. ಬಿಸಿಯಾಗಿರುವಾಗಲೇ ತಿನ್ನಿ. (ಬೇಕಾದರೆ ನಿಂಬೆರಸ ಹಾಕಬಹುದು).

## My School

My school is big and the best
It is better than the rest
I never miss it for a day
Because I love to read and play
I love to skate, swim and run
All our activities are such fun
We study our lessons well
Please don't disturb us with the bell
Our teacher is good and kind
She helps us to improve our mind

By Chandan R Bhat

## ಭಾರತದ ಸೂಫಿ ಪರಂಪರೆ ಮತ್ತು ಆಧ್ಯಾತ್ಮದ ಪ್ರಥಮ ಕೊಂಡಿ-ಹಜ್ರತ್ ಖ್ವಾಜ ಗರೀಬ್ ನವಾಜ್

ಆಜಾದ್ ಐ.ಎಸ್.

ಇಸ್ಲಾಂಮಿನ ಪವಿತ್ರ 'ಹದೀಸ್' (ಮೊ.ಪೈಗಂಬರ್.ರ ದಾಖಲಿತ ಉಪದೇಶಗಳು) ಪ್ರಕಾರ "ದೇವರನ್ನು ಅರಿತವನು ಶಾಂತನಾಗಿರುತ್ತಾನ್". ಒಂದೇ ಮಾತು ಸಾಕು ವಿಶ್ವದ ಎಲ್ಲಾ ಭಯೋತ್ಪಾದಕ ಮತ್ತು ತಮ್ಮನ್ನು ಮುಸ್ಲಿಮರೆಂದು ಕರೆದುಕೊಳ್ಳುವ ಸಂಘಟನೆಗಳಿಗೆ ಕಿವಿಮಾತು ಹೇಳಲು. ಧರ್ಮ ದೇವರೊಂದಿಗೆ ತನ್ನ ಮನಸ್ಸನ್ನು ಬೆಸೆದುಕೊಂಡು ಜೀವಾತ್ಮಗಳ ಮಧ್ಯೆಯ ಪರಸ್ಪರ ಪ್ರೇಮಕ್ಕೆ ಪೂರಕವೇ ಹೊರತು ಧರ್ಮ ಹಿಂಸೆಯ ಮೂಲಕ ಆಚರಿಸಲಾಗದು ಎನ್ನುವುದಕ್ಕೆ ಇಸ್ಲಾಂ ಧರ್ಮ ವಿಸ್ತರಣೆಯ ಮೊದಲ ಹಂತಗಳಲ್ಲೇ ಬೆಳೆದು ಬಂದ "ಸೂಫಿ" ಪರಂಪರೆಯೇ ಸಾಕ್ಷಿ. "ಸೂಫಿ" ಅಥವಾ ಮೊದಲ ಪಂಕ್ತಿಗರು ಎಂದರೆ ದೇವರ ಧ್ಯಾನಕ್ಕೆ ತಮ್ಮನ್ನು ಅರ್ಪಿಸಿಕೊಂಡ ಮೊದಲಿಗರು ಎನ್ನುವ ಅರ್ಥ ಒಂದಾದರೆ. ದೇವರ ಧ್ಯಾನ ಮತ್ತು ಅಂತರಂಗ ಶುದ್ಧಿ ಸೂಫಿ ಪಂಥದ ಮೂಲ ಮಂತ್ರ. ಇದೇ ಕಾರಣಕ್ಕೆ ಹಿಂದೂ ಧರ್ಮದ ದಾಸ/ಸಂತ ಪರಂಪರೆ ಸೂಫಿ ಪರಂಪರೆ ಮೂಲತಃ ಒಂದೇ ಗುರಿಯ ಧರ್ಮ ಪಂಥಗಳು ಎನ್ನಬಹುದು.

ಭಾರತದಲ್ಲಿ ಸೂಫಿ ಪಂಥ ಪ್ರಾರಂಭವಾಗಿದ್ದು ಉತ್ತರ ಮತ್ತು ದಕ್ಷಿಣ ಭಾರತದಲ್ಲಿ ಸಮಾನವಾಗಿ ಮಾನ್ಯವಾಗಿರುವ ರಾಜಾಸ್ಥಾನದ ಅಜ್ಮೀರ್ ನ ದರ್ಗಾ ಖ್ವಾಜಾ ಗರೀಬ್ ನವಾಜ್ ನ ಮೂಲ ಸಂತ ಖ್ವಾಜಾ ಮೊಯಿನುದ್ದೀನ್ ಚಿಶ್ತಿ ಮೂಲಕ. ಚಿಶ್ತಿಯವರು ಹುಟ್ಟಿದ್ದು ಕ್ರಿ.ಶ. 1141 ರಲ್ಲಿ ಪೂರ್ವ ಪರ್ಶಿಯಾದ ಸೇಜಿಸ್ತಾನದಲ್ಲಿ. ತಮ್ಮ ಜೀವನ ಮಾರ್ಗಕ್ಕೆ ತೋಟ ಮತ್ತು ಗಾಳಿಗಿರಣಿಯನ್ನು ತಮ್ಮ ಹಿರಿಯರಿಂದ ಪಡೆದ ಚಿಶ್ತಿಯವರು ಆಧ್ಯಾತ್ಮದತ್ತ ಒಲವು ತೋರಲು ಕಾರಣರಾಗಿದ್ದು ಅವರ ತೋಟದ ಬಳಿಬಂದ ದರ್ವೇಶಿ ಸಂತರಾದ ಇಬ್ರಾಹಿಂ ಖಂದೂಸಿ. ಅವರ ಮಾತುಗಳು, ಜೀವನ ಶೈಲಿಯಿಂದ ಪ್ರಭಾವಿತರಾಗಿದ್ದರು. ತಮ್ಮೆಲ್ಲ ಸಂಪತ್ತನ್ನು ಬಡ ಬಗ್ಗರಲ್ಲಿ ಹಂಚಿ ಅಧ್ಯಾತ್ಮಿಕ ಅರಿವನ್ನು ಹೆಚ್ಚಿಸಿಕೊಳ್ಳಲು ಆಗಿನ ಆಧ್ಯಾತ್ಮ ಬೋಧನಾ ಕೇಂದ್ರಗಳಾಗಿದ್ದ ಸಮರ್ ಖಂಡ್ ಕಡೆ ಪ್ರಯಾಣ ಬೆಳೆಸಿದರು. ಅಲ್ಲಿಂದ ಗುರುವೊಬ್ಬರ ಹುಡುಕಾಟದಲ್ಲಿ ತಿರುಗಾಟ ಪ್ರಾರಂಭಿಸಿದರು. ಆಗ ಅವರಿಗೆ ಸಿಕ್ಕಿದ್ದು ಹಜ್ರತ್ ಖ್ವಾಜಾ ಹಾರೂನಿ. ಆ ನಂತರ ಪವಿತ್ರ ಹಜ್ ಯಾತ್ರೆ ಮುಗಿಸಿ ಮದೀನದಲ್ಲಿರುವಾಗ ಕನಸಿನಲ್ಲಿ ದೇವ ದೂತ ಪೈಗಂಬರರನ್ನು ಕಂಡು ಅವರ ಆದೇಶದಂತೆ ಭಾರತಕ್ಕೆ ಪಯಣ ಬೆಳೆಸಿದರು. ತಮ್ಮ ಜೀವನದ 52 ನೇ ವಯಸಿನಲ್ಲಿ ಭಾರತದ ಅಜ್ಮೀರಿಗೆ ತಲುಪಿದ ಸಂತರು ಅಲ್ಲಿಯೇ ನೆಲಸಿ ಭಾರತದಲ್ಲಿ 'ಸೂಫಿ' ಪಂಥದ ಪ್ರಾರಂಭಕ್ಕೆ ಕಾರಣರಾದರು. ಅಜ್ಮೀರಿನಲ್ಲಿ ಖ್ವಾಜಾರು ನೆಲೆಸುವ ಸಂದರ್ಭದಲ್ಲಿ ರಜಪೂತ ದೊರೆಗಳಲ್ಲಿ ಸುಪ್ರಸಿದ್ಧ ದೊರೆ ಪೃಥ್ವಿರಾಜ್ ಚೌಹಾಣ್ ಆಳ್ವಿಕೆಯಿತ್ತು. ಈಗಿನ ಜಿಲ್ಲಾ ಖ್ವಾಜಾ ಸಾಹೇಬ್ ಕೊಳದ ಬಳಿಯಿರುವ ಗುಡ್ಡದ ಮೇಲೆ ತಮ್ಮ ಕುಟೀರವನ್ನು ಸ್ಥಾಪಿಸಿದರು.

ಖ್ವಾಜಾರಲ್ಲಿ ಅದ್ವಿತೀಯ ಅಗೋಚರ ಶಕ್ತಿಯೊಂದಿತ್ತು ಅವರಿಗೇ ಅರಿವಿಲ್ಲದೇ ಹಲವಾರು ಪವಾಡಗಳಿಗೆ ಅದು ಕಾರಣವಾಗಿತ್ತು. ಎಲ್ಲದಕ್ಕೂ ಅವರ ಉತ್ತರ ಒಂದೇ ಆಗಿರುತ್ತಿತ್ತು. ದೇವರಿಗೆ ಯಾರು ಬೇಕಾದರೂ ಹತ್ತಿರ ಆಗಬಹುದು, ಅಂತಹವರ ಮಾತು ವೇದನೆ ಎಲ್ಲಾ ದೇವರಿಗೆ ಅರ್ಥವಾಗುತ್ತದೆ ಸ್ವಚ್ಛಮನದ ಕೋರಿಕೆ ದೇವರು ಈಡೇರುಸುತ್ತಾನೆ ಹಾಗೆಯೇ ಪೀಡನೆಗಳನ್ನೂ ನಿವಾರಿಸುತ್ತಾನೆ, ಜನ ನನ್ನಲ್ಲಿ ನಂಬಿಕೆ ಮತ್ತು ನಿವೇದನೆ ಇಡುತ್ತಾರೆ ಅವರ ನಿವೇದನೆ ದೇವರಲ್ಲಿಗೆ ನನ್ನ ಮೂಲಕ ತಲುಪಿದರೆ ಅದು ದೇವರಿಗೆ ಇಷ್ಟವಾಗಿ ಅವರ ಇಷ್ಟಾರ್ಥ ನೆರವೇರುತ್ತದೆ. ಖ್ವಾಜಾರ ಏಕಮಾತ್ರ ಶಕ್ತಿ ಈ ಆಧ್ಯಾತ್ಮ ತೀವ್ರತೆಯೇ ಆಗಿತ್ತು. ಪೃಥ್ವಿರಾಜರ ಆಸ್ಥಾನದಲ್ಲಿ ಅಜಯ್ ಪಾಲ್ ಎಂಬ ಯಕ್ಷಿಣಿವಿದ್ಯಾಪಾರಂಗತ ಪಂಡಿತನೊಬ್ಬ ಇದ್ದ. ಆಧ್ಯಾತ್ಮ ಬೋಧನೆ ಮತ್ತು ಖ್ವಾಜಾರ ಅಪೂರ್ವ ಶಕ್ತಿಗಳ ಪರಿಚಯವಾಗಿ ಅಜಯ್ ಪಾಲ್ ಅವರ ಶಿಷ್ಯನಾಗಿಬಿಟ್ಟನಂತೆ. ಇದೇ ಸಮಯದಲ್ಲಿ ಸರಿ ಸುಮಾರಿಗೆ ಕ್ರಿ.ಶ. 1190 ರಲ್ಲಿ ಘೋರಿ ಭಾರತದ ಮೇಲೆ ದಂಡೆತ್ತಿ ಬಂದ ಖ್ವಾಜಾರನ್ನು ಖುದ್ದಾಗಿ ಭೇಟಿಯಾಗಿ ಅವರ ಆಶೀರ್ವಾದ ಪಡೆದನೆಂದರೆ ಅವರ ವರ್ಚಸ್ಸು ಎಷ್ಟಿತ್ತೆಂದು ಯೋಚಿಸಬಹುದು.

ತಮ್ಮ ಸುಮಾರು 92 ನೇ ವಯಸ್ಸಿನಲ್ಲಿ ದೈವಾಧೀನರಾದ ಖ್ವಾಜಾರ ಸಮಾಧಿಯನ್ನು ಅವರು ವಾಸಿಸುವ ಕುಟೀರದಲ್ಲೇ ನಿರ್ಮಿಸಲಾಯಿತು.

ಈಗ ಅದೇ ಖ್ವಾಜಾರ ಸಮಾಧಿ ಖ್ವಾಜಾ ಗರೀಬ್ ನವಾಜ್ ಸಮಾಧಿಯೆಂದು ಹೆಸರಾಗಿದೆ. ಇಸ್ಲಾಮಿನ ಕ್ಯಾಲಂಡರಿನ ರಂಜಾನ್ ತಿಂಗಳಿಗೆ ಒಂದು ತಿಂಗಳು ಮೊದಲು ಬರುವ ಶಾಬಾನ್ ತಿಂಗಳ 3ನೇ ದಿನದಂದು ವಾರ್ಷಿಕ ಉರ್ಸ್ ನಡೆಯುತ್ತದೆ. ಈ ಸಂದರ್ಭದಲ್ಲಿ ಖ್ವಾಜಾ ಸಮಾಧಿಯ ದರ್ಶನಕ್ಕೆ ಎಲ್ಲಾ ಧರ್ಮದ ಯಾತ್ರಾರ್ಥಿಗಳು ಬರುತ್ತಾರೆ ತಮ್ಮ ಶ್ರದ್ಧೆ ಭಕ್ತಿಗಳ ಮೂಲಕ "ಮನ್ನತ್" ಅಥವಾ 'ಹರಕೆ' ಹೊರುತ್ತಾರೆ ಮತ್ತು ಪೂರೈಸುತ್ತಾರೆ. ಇದು ಕೇವಲ ನಂಬಿಕೆಯ ಆಚರಣೆಯಾಗಿದೆ ಯಾವುದೇ ಧರ್ಮದ ಆಚರಣೆಯಾಗಿರುವುದಿಲ್ಲ. ಈ ಆಚರಣೆಯಲ್ಲಿ ಭಕ್ತಿಪ್ರಧಾನ ಖವ್ವಾಲಿ ಪ್ರಮುಖ ಆಕರ್ಷಣೆಯಾಗಿರುತ್ತದೆ. ದೈವೀ ಆದೇಶದಂತೆ ತಮ್ಮ 50 ನೇ ವಯಸ್ಸಿನಲ್ಲಿ ಖ್ವಾಜಾರು ಮದುವೆಯಾದರೆಂದು ಉಲ್ಲೇಖವಿದೆ. ಅವರ ಐವರು ಪುತ್ರರಲ್ಲಿ ಹಿರಿಯರಾದ ಖ್ವಾಜಾ ಹುಸಾಮುದ್ದೀನ್ ತಂದೆಯಯಂತೆ ಮಹಾನ್ ಸೂಫಿ ಸಂತರಾಗಿದ್ದರು. .

ಭಕ್ತಿ ಪರಂಪರೆ, ಹಿಂದೂ ಧಾರ್ಮಿಕ ಸಂತ-ದಾಸ ಮರಂಪರೆ, ಇಸ್ಲಾಂ ಸೂಫಿ ಪಂಥ (ಇದು ಖ್ವಾಜಾರ ನಂತರ ಬಂದದ್ದು) ಮತ್ತು ಸಿಕ್ಖರ ಗುರು ಪಂಥ ಎಲ್ಲವೂ ಆಧ್ಯಾತ್ಮಿಕ ಗಾಯನಕ್ಕೆ ಒತ್ತು ಕೊಟ್ಟಿದ್ದು ಸತ್ಯ. ಮನದಾಳಕ್ಕೆ ಇಳಿಯುವ ಮತ್ತು ಜನರಲ್ಲಿ ನಂಬಿಕೆ ತರುವ ಪ್ರಭಾವಶಾಲಿ ಮಾಧ್ಯಮವಾಗಿ ಸಂಗೀತದ ಒಂದು ನವ ಆಯಾಮವೇ ಪ್ರಾರಂಭವಾಯಿತು. ಖವ್ವಾಲಿ ಸೂಫಿ ಸಂತ ಪರಂಪರೆಯ ಅನ್ವರ್ಥ ಸಂಕೇತವಾಯಿತು.

## ಹೋಮ್ ಮೇಡ್ ಚಾಕೊಲೇಟ್

ಮಾಲಿನಿ ಮೂರ್ತಿ

ಬೇಕಾದ ಸಾಮಾಗ್ರಿ

ಹಾಲಿನಪುಡಿ-1 ಕಪ್

ಸಕ್ಕರೆ-1 ಕಪ್

ಬೆಣ್ಣೆ-1/2 ಕಪ್

ನೀರು-1/2 ಕಪ್

ಹಾಲು-1/2 ಕಪ್

ಡ್ರಿಂಕಿಂಗ್ ಚಾಕೊಲೇಟ್ ಪೌಡರ್-

4 ರಿಂದ 5 ಚಮಚ

ಮಾಡುವ ವಿಧಾನ:

ಹಾಲಿನಪುಡಿ, ಚಾಕೊಲೇಟ್ ಪೌಡರ್, ಮತ್ತು ಹಾಲನ್ನು ಚೆನ್ನಾಗಿ ಹೊಂದಿಸಿ ಕಲೆಸಿಟ್ಟುಕೊಳ್ಳಬೇಕು.

ದಪ್ಪ ತಳದ ಪಾತ್ರೆಯಲ್ಲಿ ನೀರು ಸಕ್ಕರೆ ಹಾಕಿ ಒಲೆಯ ಮೇಲಿಟ್ಟು ಕೈಯಾಡಿಸುತ್ತಿರಬೇಕು.

ಒಂದೆಳೆ ಪಾಕ ಬಂದಾಗ ಕಲೆಸಿಟ್ಟುಕೊಂಡ ಮಿಶ್ರಣವನ್ನು ಹಾಕಿ ಅದರ ಹಸಿ ಘಮ ಹೋಗುವವರೆಗೂ ಕೈಯಾಡಿಸುತ್ತಿರಬೇಕು. (ಸುಮಾರು ಹತ್ತು ನಿಮಿಷಗಳು).

ನಂತರ ಬೆಣ್ಣೆಯನ್ನು ಸೇರಿಸಿ ಪೂರ್ತಿ ಮಿಶ್ರಣ ಪಾತ್ರೆಯ ಅಂಚನ್ನು ಬಿಡುವವರೆಗೂ ಕೈಯಾಡಿಸುತ್ತಿರಬೇಕು(ಸುಮಾರು 15 ರಿಂದ 20 ನಿಮಿಷಗಳು)

ಕೊನೆಯಲ್ಲಿ ಬೆಣ್ಣೆ ಸವರಿಟ್ಟ ತಟ್ಟೆಗೆ ಸುರಿದು ಬೇಕಾದ ಆಕಾರಕ್ಕೆ ಕತ್ತರಿಸಿದರೆ ರುಚಿಯಾದ ಮೃದುವಾದ ಹೋಂ ಮೇಡ್ ಚಾಕೊಲೇಟ್ ಸಿದ್ಧ.

## ಸಂದರ್ಭಕ್ಕೆ ಸರಿಯಾದ ಪ್ರಾರ್ಥನಾ ಶ್ಲೋಕಗಳು....

ವಿದ್ಯಾ ಚಿನ್ಮಯ

ಇವೆಲ್ಲಾ ನಾವು ಚಿಕ್ಕವರಿದ್ದಾಗ ನಮ್ಮ ಅಪ್ಪ ನಮಗೆ ಕಲಿಸಿದ ಶ್ಲೋಕಗಳು.... ನಮ್ಮ ಮಕ್ಕಳಿಗೂ ನಾವು ಇವನ್ನು ಹೇಳಿ ಕೊಡಬೇಕಲ್ಲವೇ...?!

**1. ರಾತ್ರಿ ನಿದ್ದೆ ಮಾಡುವಾಗ:** ( ಕೆಟ್ಟ ಕನಸು ಬಾರದಂತೆ)
ರಾಮಂ ಸ್ಕಂದಂ ಹನೋಮಂತಂ ವೈನ ತೇಯಂ ವೃಕೋದರಂ
ಶಯನೇ ಯಸ್ಮರೇ ನಿತ್ಯಂ ದು:ಸ್ವಪ್ನಂ ತಸ್ಯ ನಶ್ಯತಿ.

**2. ಬೆಳಗ್ಗೆ ನಿದ್ದೆಯಿಂದ ಎದ್ದ ಕೂಡಲೇ:**
ಕರಾಗ್ರೇ ವಸತೇ ಲಕ್ಷ್ಮೀ: ಕರಮಧ್ಯೇ ಸರಸ್ವತಿ
ಕರಮೂಲೇ ಸ್ಥಿತಾ ಗೌರೀ ಪ್ರಭಾತೇ ಕರದರ್ಶನಂ.

**3. ಹಾಸಿಗೆಯಿಂದ ಎದ್ದು ನಡೆಯುವಾಗ:**
(ಭೂ ಮಾತೆಯನ್ನು ಪಾದದಲ್ಲಿ ಸ್ಪರ್ಷ ಮಾಡುವುದಕ್ಕೆ ಕ್ಷಮಾಪಣೆ)
ಸಮುದ್ರ ವಸನೇ ದೇವಿ ಪರ್ವತಸ್ತನ ಮಂಡಲೇ
ವಿಷ್ಣು ಪತ್ನಿ ನಮಸ್ತುಭ್ಯಂ ಪಾದಸ್ಪರ್ಶಂ ಕ್ಷಮಸ್ವಮೇ.

**4. ಸ್ನಾನ ಮಾಡುವಾಗ:**
ಗಂಗೇಚ ಯಮುನೇಚೈವ ಗೋದಾವರಿ ಸರಸ್ವತಿ
ನರ್ಮದೇ ಸಿಂಧು ಕಾವೇರಿ ಜಲೆಸ್ಮಿನ್ ಸನ್ನಿಧಿಂ ಕುರು.

**5. ಓದಲು ಕುಳಿತಾಗ:**
ಸರಸ್ವತಿ ನಮಸ್ತುಭ್ಯಂ ವರದೇ ಕಾಮ ರೂಪಿಣೀ
ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇಸದಾ.

**6. ಏನೇ ಶುಭ ಕಾರ್ಯವನ್ನು ಶುರುಮಾಡುವಾಗ:(ವಿಘ್ನಗಳು ಬಾರದಂತೆ)**
ವಕ್ರ ತುಂಡ ಮಹಾಕಾಯ ಸೂರ್ಯ ಕೋಟಿ ಸಮಪ್ರಭಾ
ನಿರ್ವಿಘ್ನಂ ಕುರುಮೇ ದೇವ ಸರ್ವ ಕಾರ್ಯೇಶು ಸರ್ವದಾ.

**7. ಊಟ ಶುರುಮಾಡುವ ಮೊದಲು:**
ಅನ್ನ ಪೂರ್ಣೇ ಸದಾ ಪೂರ್ಣೇ ಶಂಕರ ಪ್ರಾಣ ವಲ್ಲಭೇ
ಜ್ಞಾನ ವೈರಾಗ್ಯ ಸಿದ್ಯರ್ಥಂ ಭಿಕ್ಷಾಂ ದೇಹಿಚ ಪಾರ್ವತಿ.

**8. ಸಂಜೆ ದೀಪ ಹಚ್ಚುವಾಗ:**
ದೀಪ ಮೂಲೇ ಸ್ಥಿತೋ ಬ್ರಹ್ಮ ದೀಪ ಮಧ್ಯೇ ಜನಾರ್ಧನಾ
ದೀಪಾಗ್ರೇ ಶಂಕರೋ ದೇವ: ಸಂಧ್ಯಾ ದೀಪ ನಮೋಸ್ತುತೇ.

**9. ತುಳಸಿಗೆ ದೀಪ ಹಚ್ಚುವಾಗ:**
ನಮಃ ತುಳಸೀ ಕಲ್ಯಾಣೀ ನಮೋ ವಿಷ್ಣು ಪ್ರಿಯೇ ಶುಭೇ
ನಮೋ ಮೋಕ್ಷ ಪ್ರದೇ ದೇವೀ ನಮಃ ಸಂಪತ್ಪ್ರದಾಯಿಕೇ

**10. ಶನಿ ದೋಷ ಉಳ್ಳವರು ಹೇಳಬಹುದಾದ ಶ್ಲೋಕ:**
ಕೋಣಸ್ಥಃ ಪಿಂಗಲೋ ಬಭ್ರುಃ ಕೃಷ್ಣೋ ರೌದ್ರೋಂತ ಕೋಯಮಃ
ಸೌರಿ ಶನೈಶ್ಚರೋ ಮಂದಃ ಪಿಪ್ಪಲಾದೇನ ಸಂಸ್ತುತಃ
ಏತಾನಿ ದಶನಾಮಾನಿ ಪ್ರಾತರುತ್ಥಾಯಃ ಪಠೇತ್
ಶನೈಶ್ಚರ ಕೃತಾ ಪೀಡಾ ನಕದಾಚಿದ್ಭವಿಶ್ಯತಿ.

**11. ಹೆಣ್ಣು ಮಕ್ಕಳು ತನ್ನ ಪತಿಯ ಆರೋಗ್ಯ ಹಾಗೂ ಆಯುಷ್ಯ ವೃದ್ಧಿಗೆ ಹೇಳಬಹುದಾದ ಶ್ಲೋಕ:**
ಪಾರ್ವತೀಶ ಮಹಾದೇವ ಪತೀಂ ಮೇ ಕುರು ಶಂಕರಾ
ಯುವಾನಂ ಧರ್ಮ ನಿರತಂ ಆಯುಷ್ಮಂತಂ ಯಶಸ್ವಿನಂ.

**12. ಸರ್ಪ ಭಯದ ನಿವಾರಣೆಗೆ:**
ಷಡಾನನಂ ಕುಂಕುಮ ರಕ್ತ ವರ್ಣಂ ಮಹಾ ಮತೀಂ ದಿವ್ಯ ಮಯೂರ ವಾಹನಂ
ರುದ್ರಸ್ಯ ಸೂನುಂ ಸುರ ಸೈನ್ಯ ನಾಥಂ ಗುಹಂ ಸದಾ ಶರಣ ಮಹಂ ಪ್ರಪದ್ಯೇ.

**14. ಸುಖ ಮರಣವನ್ನು ಪ್ರಾರ್ಥಿಸಿ:**
ಅನಾಯಾಸೇನ ಮರನಂ ವಿನಾ ದೈನ್ಯೇನ ಜೀವನಂ
ದೇಹಿಮೇ ಕೃಪಯಾ ಶಂಭೋ ತ್ವಯಿ ಭಕ್ತಿಂ ಅಚಂಚಲಾಂ.

**15. ತಾನು ಮಾಡಿದ ತಪ್ಪನ್ನೆಲ್ಲಾ ಕ್ಷಮಿಸಲು:**
ಕರಚರಣ ಕೃತಂ ವಾಕ್ಕಾಯಜಂ ಕರ್ಮಜಂ ವಾ
ಶ್ರವಣ ನಯನಜಂ ವಾ ಮಾನಸಂ ವಾಪರಾಧಂ
ವಿಹಿತಮ ವಿಹಿತಂ ವಾ ಸರ್ವಮೇ ತತ್ ಕ್ಷಮಸ್ವ
ಜಯ ಜಯ ಕರುಣಾಬ್ದೇ ಶ್ರೀ ಮಹಾದೇವ ಶಂಭೋ.

## ಧೀಮಂತ ಕಿಶೋರ -ಹೇಮು ಕಲಾನಿ

ಮ. ಸು. ಮನ್ನಾರ್ ಕೃಷ್ಣ




ಹೇಮು ಕಲಾನಿ ಸುಮಾರು 18 ವರ್ಷದ ಹುಡುಗ. ಸಿಂಧ್ ಪ್ರಾಂತ್ಯದ ಸುಕ್ಕೂರಿನ (ಈಗ ಪಾಕಿಸ್ತಾನದಲ್ಲಿದೆ) ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ. ಕಿಶೋರನಾದರೂ ಸಹ ದೈಹಿಕ ಬಲಶಾಲಿಯೂ, ಧೈರ್ಯಶಾಲಿಯೂ, ಆಲೋಚನೆಯಲ್ಲಿ ಪ್ರಬುದ್ಧನೂ ಆಗಿದ್ದ.

1942ರ ಅಕ್ಟೋಬರ್ 10ರಂದು ಪೋಲೀಸರು ಅವನನ್ನು ದಸ್ತಗಿರಿ ಮಾಡಿದರು. ಹಿಂದಿನ ರಾತ್ರಿ ಅವನು ಒಂದು ರೈಲುಮಾರ್ಗದ ಫಿಷ್ ಪ್ಲೇಟುಗಳನ್ನು ಕಳಚಲು ಯತ್ನಿಸಿದನೆಂದು ಅಪಾದನೆ ಹೊರಿಸಿದರು. ಅದು ಬಹಳ ಗುರುತರವಾದ ಆಪಾದನೆಯಾಗಿತ್ತು. ಅದರಿಂದ ಕಲಾನಿಯ ಸ್ನೇಹಿತರು ಮತ್ತು ಸಂಬಂಧಿಕರಿಗೆ ಆಶ್ಚರ್ಯ ಮತ್ತು ಅಘಾತವೆರಡೂ ಉಂಟಾಯಿತು.

ಹೇಮು ಕಲಾನಿ ಆ ಆಪಾದನೆಯನ್ನು ನೇರವಾಗಿ, ನಿರ್ಭಯವಾಗಿ, ನಿಶ್ಚಿಂತೆಯಿಂದ ಒಪ್ಪಿಕೊಂಡನು. ಅಂದು ಬ್ರಿಟಿಷ್ ಸೈನಿಕರನ್ನು ಹೊತ್ತ ರೈಲು ಆ ಮಾರ್ಗವಾಗಿ ಬಲೂಚಿಸ್ತಾನದ ಕ್ವೆಟ್ಟಾ ಪಟ್ಟಣಕ್ಕೆ ಹೋಗುವುದಿತ್ತು. ಆ ರೈಲನ್ನು ಉರುಳಿಸಿ ಬ್ರಿಟಿಷ್ ಸೈನ್ಯದ ತುಕಡಿಯನ್ನು ಧ್ವಂಸ ಮಾಡುವುದು ತನ್ನ ಉದ್ದೇಶವಾಗಿತ್ತೆಂದು, ಅಂಜದೆ ಅಳುಕದೆ ಹೇಳಿಕೆ ನೀಡಿದನು. ಅವನ ಕೆಲವು ಪ್ರಭಾವಿ ನೆಂಟರು ಅವನು ತನ್ನ ಹೇಳಿಕೆಯನ್ನು ಬದಲಿಸುವಂತೆ ಮಾಡಲು ಪ್ರಯತ್ನಿಸಿದರು. ಆದರೆ ಹೇಮು ಖಡಾಖಂಡಿತವಾಗಿ ನಿರಾಕರಿಸಿದನು. ಅಷ್ಟೇ ಅಲ್ಲ, ತನ್ನ ಸಹವರ್ತಿಗಳ ಹೆಸರುಗಳನ್ನು ಹೇಳಲು ಧೃಢವಾಗಿ ನಿರಾಕರಿಸಿದನು.

ಆ ಸಮಯದಲ್ಲಿ ಸಿಂಧ್ ಪ್ರಾಂತ್ಯವು ಸೈನ್ಯಾಡಳಿತಕ್ಕೆ ಒಳಪಟ್ಟಿತ್ತು. ಅದರಿಂದ ಅವನ ಕೇಸು ಪೋಲೀಸರಿಂದ ಸೈನ್ಯಕ್ಕೆ ವರ್ಗಾಯಿಸಲ್ಪಟ್ಟಿತು. ಸೈನ್ಯಾಡಳಿತದ ಕಾಯಿದೆ ಪ್ರಕಾರ ಅಂತಹ ಅಪರಾಧಕ್ಕೆ ಶಿಕ್ಷೆ 'ಮರಣ ದಂಡನೆ'. ಆ ಕಾಲದಲ್ಲಿ ಪ್ರಸಿದ್ಧ ವಕೀಲರಾಗಿದ್ದ, ಮುಂದೆ ಪಾಕಿಸ್ತಾನದ ಕೇಂದ್ರ ಸರ್ಕಾರದಲ್ಲಿ ಕಾನೂನು ಸಚಿವರಾದ, ಫಿರ್ಜಾದ ಅಬ್ದುಲ್ ಸತ್ತರ್ ರವರು ಹೇಮು ಪರ ವಕಾಲತ್ತು ವಹಿಸಿ ನ್ಯಾಯಾಲಯದಲ್ಲಿ ವಾದ ಮಾಡಿದರು. ಆದರೆ ಹೇಮು ಮಾತ್ರ ಅಚಲನಾಗಿದ್ದ, ಶಾಂತನಾಗಿದ್ದ. ಅವನು ತನ್ನ ಕೃತ್ಯಕ್ಕೆ ಪಶ್ಚಾತ್ತಾಪ ಪಡಲೂ ಇಲ್ಲ, ಕನಿಕರ ಅಥವಾ ಕ್ಷಮೆಯನ್ನು ಬೇಡಲೂ ಇಲ್ಲ. ಒಬ್ಬ ಶೂರನ ಸಾವು ಪಡೆಯಲು ಅವನು ಸಿದ್ದನಾಗಿದ್ದ. ಸೈನ್ಯ ನ್ಯಾಯಾಲಯ ಅವನಿಗೆ ಮರಣ ದಂಡನೆ ವಿಧಿಸಿತು. 1943ರ ಜನವರಿ 11ರಂದು ಅವನನ್ನು ಗಲ್ಲಿಗೇರಿಸಲು ನಿಗದಿಯಾಯಿತು.

